
ಡಾ. ದೇವೇಂದ್ರ ಕುಮಾರ ಹಕಾರಿ

ವ್ಯಕ್ತಿ ಪರಿಚಯ



ಡಾ. ಹರಿಲಾಲ್ ಪವಾರ್

ಜನಪ್ರಿಯ ಜಾನಪದ ಪುಸ್ತಕ ಮಾಲೆ-೩೨

ಡಾ. ದೇವೇಂದ್ರಕುಮಾರ ಹಕಾರಿ

ವ್ಯಕ್ತಿ ಪರಿಚಯ

ಡಾ॥ ಹರಿಲಾಲ ಪವಾರ

ನಿರ್ದೇಶಕರು, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ,

ಧಾರವಾಡ-೫೮೦ ೦೦೩

ಕರ್ನಾಟಕ ಜಾನಪದ ಪರಿಷತ್ತು

ನಂ. ೧, ಜಲದರ್ಶಿನಿ ಬಡಾವಣೆ

ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,

ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

Dr. DEVENDRA KUMARA HAKARI- A Pen Portrait- By **Dr. Harilala Pawar.** Pulished by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054, Phone : 080-23605033. Janapada Loka : 7201143

ಪ್ರಥಮ ಮುದ್ರಣ : ೨೦೦೮ ಪುಟಗಳು : ೩೨

ಪ್ರತಿಗಳು : ೨೦೦೦

ಬೆಲೆ : ರೂ. ೧೦ (ಹತ್ತು ರೂಪಾಯಿಗಳು)

ಮುದ್ರಕರು :

ಚಂದನ ಪ್ರಿಂಟರ್ಸ್

ನಂ. ೫೭, ವಿನಾಯಕ ಕಾಂಪ್ಲೆಕ್ಸ್

೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ

ಬ್ಯಾಂಕ್ ಕಾಲೋನಿ, ಬೆಂಗಳೂರು–೫೬೦ ೦೫೦

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ- ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಖ್ಯಾತ ಲೇಖಕರಾದ ಡಾ. ಹರಿಲಾಲ ಪವಾರ ಅವರು **'ಡಾ. ದೇವೇಂದ್ರಕುಮಾರ ಹಕಾರಿ'** ಅವರನ್ನು ಕುರಿತು ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಜಿ. ನಾರಾಯಣ

೧೫-೮-೨೦೦೮ ಅಧ್ಯಕ್ಷರು

ಬೆಂಗಳೂರು ಕರ್ನಾಟಕ ಜಾನಪದ ಪರಿಷತ್ತು

ಡಾ. ದೇವೇಂದ್ರಕುಮಾರ ಹಕಾರಿ

ದೇವೇಂದ್ರಕುಮಾರ ಹಕಾರಿ ಅವರು ರಾಯಚೂರ (ಈಗಿನ ಕೊಪ್ಪಳ) ಜಿಲ್ಲೆಯ ಯಲಬುರ್ಗಿ ತಾಲೂಕಿನ ಚಿಕ್ಕೇನಕೊಪ್ಪದಲ್ಲಿ ತಾಯಿ ಮಲ್ಲವ್ವ, ತಂದೆ ಸಿದ್ಧಪ್ಪನವರ ಮಗನಾಗಿ ದಿನಾಂಕ ೧೪, ಏಪ್ರೀಲ್ ೧೯೩೧ ರಂದು ರೈತ ಕುಟುಂಬದಲ್ಲಿ ಜನಿಸಿದರು. ಚಿಕ್ಕೇನಕೊಪ್ಪ ನಾನೂರು ಮನೆಗಳ ಒಂದು ಸಣ್ಣ ಹಳ್ಳಿ. ಈ ಹಳ್ಳಿ ಪರಿಸರದಲ್ಲಿಯೇ ಅವರ ಬಾಲ್ಯ ಕಳೆದರು. ಸಣ್ಣ ಮಗುವಾಗಿದ್ದಾಗ ಬಂಕದಲ್ಲಿ ಮಲಗಿಕೊಂಡು ದಾಸರು ಹಾಡಿದ ಕೆಲವು ಹಾಡನ್ನು ಕೇಳಿದ್ದು ನೆನಪಿದೆ ಎಂದು ಅವರು ಹೇಳಿದ್ದರು. ಉದಾ:

ಗುರುವೇ ಶರಣಯ್ಯ ಗುರುರಾಜ ಶರಣೋ
ಸರ್ವಾರು ಗಂಭೀರ ಶರಣಯ್ಯ ಗುರುವೆ
ಹಂಪೆಯ ವಿರೂಪಾಕ್ಷ ಶರಣಯ್ಯ:

ದಾಸರು (ವೇಷಗಾರರು) ಬೆಳಗಿನ ಜಾವ ಹಳ್ಳಿಗಳಿಗೆ ಹೋಗಿ ರೈತರ ಮನೆಗಳ ಮುಂದೆ ನಿಂತುಕೊಂಡು ಸುಶ್ರಾವ್ಯವಾಗಿ ಹಾಡು ಹೇಳುತ್ತಿದ್ದರು. ರೈತಾಪಿಹೆಣ್ಣುಮಕ್ಕಳು ಇಂತಹ ಜನಪದ ಕಲಾವಿದರನ್ನು ಕಂಡಾಗ ಮನೆಯೊಳಗಿಂದ ಒಂದು ಮೊರದಲ್ಲಿ ಕಾಳು-ಕಡಿಗಳನ್ನು ತಂದು ಅವರಿಗೆ ಭಿಕ್ಷೆಯ ರೂಪದಲ್ಲಿ ನೀಡುತ್ತಿದ್ದರು. ಇಂತಹ ಸನ್ನಿವೇಶವನ್ನು ದೇವೇಂದ್ರಕುಮಾರ ಹಕಾರಿ ಅವರು ಚಿಕ್ಕಮಗುವಾಗಿದ್ದಾಗಲೇ ಗಮನಿಸಿದ್ದರು. ಮುಂದೆ ಇಂತಹ ಹಾಡುಗಳೇ ಅವರಿಗೆ ದಾರಿದೀಪವಾಗಿದ್ದವು.

ಚಿಕ್ಕೇನಕೊಪ್ಪದಲ್ಲಿಯೇ ಹಕಾರಿ ಅವರ ಬಾಲ್ಯ ಶಿಕ್ಷಣ ನಡೆಯಿತು. ನಾಲ್ಕನೆಯ ಇಯತ್ತೆ ಪಾಸಾದ ಮೇಲೆ ಕೊಪ್ಪಳದಲ್ಲಿ ಓದಿದರು. ಗುಲಬರ್ಗಾದ ಉಸ್ಮಾನಿಯಾ ಹಾಯಸ್ಕೂಲದಲ್ಲಿ ಉರ್ದು ಮಾಧ್ಯಮದಲ್ಲಿ ಮೆಟ್ರಿಕ್‌ವರೆಗೆ ಓದಿದರು. ಪಿ.ಯು.ಸಿ. ಓದುತ್ತಿದ್ದಾಗಲೇ ಅಸಫ್‌ಶಾಹೀ ಯ ವಿರುದ್ಧದ ಹೈದರಾಬಾದ ಸ್ವಾತಂತ್ರ್ಯ ಹೋರಾಟ ಗಟ್ಟಿಗೊಂಡಿತು. ಈ ಸಂದರ್ಭದಲ್ಲಿ

ಹಲವಾರು ವಿದ್ಯಾರ್ಥಿಗಳ ಜೊತೆಗೆ ಕಾಲೇಜುಗಳಿಗೆ ಶರಣುಹೊಡೆದು ಹೋರಾಟದಲ್ಲಿ ಧುಮುಕಿದರು.

ಪಿ.ಯು.ಸಿ. ಪಾಸಾದ ಮೇಲೆ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯುದಲ್ಲಿ ಬಿ.ಎ. ಓದಿ ಪಾಸಾದರು. ಮುಂದೆ ಅದೇ ವಿಶ್ವವಿದ್ಯಾಲಯದಲ್ಲಿ ಎಂ.ಎ. ಕನ್ನಡ ಅಧ್ಯಯನ ಆರಂಭಿಸಿದರು. ಆ ಸಂದರ್ಭದಲ್ಲಿ ಕೆಲವು ಅಧ್ಯಾಪಕರು, ಸ್ನೇಹಿತರು ಸಹಾಯಮಾಡಿದರು. ಅವರಲ್ಲಿ ಪ್ರಮುಖರೆಂದರೆ ಶ್ರೀ ಡಿ.ಕೆ. ಭೀಮಸೇನರಾವ್, ಶ್ರೀ ಮಾನ್ವಿ ನರಸಿಂಗರಾವ್, ಶ್ರೀ ರಾಮಚಂದ್ರ ಪಟವಾರಿ ಮೊದಲಾದವರು. ಎಂ.ಎ. ಮುಗಿದ ಬಳಿಕ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಕನ್ನಡ ಅಧ್ಯಾಪಕರಾಗಿ ಮೂರು ವರ್ಷ ಸೇವೆ ಸಲ್ಲಿಸಿದರು. ೧೯೫೮ ರಲ್ಲಿ ಗುಲಬರ್ಗಾದ ಶರಣಬಸವೇಶ್ವರ ಕಾಲೇಜದಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿಕೊಂಡರು. ಮುಂದೆ ೧೯೬೦ ರಲ್ಲಿ ಧಾರವಾಡದ ಕರ್ನಾಟಕ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಕಾರ್ಯಮಾಡಿದರು. ೧೯೭೦ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ, ಕನ್ನಡ ಅಧ್ಯಯನ ಪೀಠಕ್ಕೆ ಪ್ರವಾಚಕರಾಗಿ ಬಂದು ಸೇವೆ ಸಲ್ಲಿಸಿದರು. ಶ್ರೀಯುತರು ಅಧ್ಯಾಪಕ ವೃತ್ತಿಯಲ್ಲಿ ಮೂವತ್ತಕ್ಕೂ ಹೆಚ್ಚು ವರ್ಷಗಳವರೆಗೆ ಸೇವೆ ಸಲ್ಲಿಸಿ ೧೯೯೧ ರಲ್ಲಿ ನಿವೃತ್ತಿಯಾದರು. ನಿವೃತ್ತರಾದ ಬಳಿಕವೂ ಅನೇಕ ಮೌಲಿಕ ಕೃತಿಗಳನ್ನು ರಚಿಸಿದರು. ಆದರೆ ಡಾ. ಹಕಾರಿಯವರನ್ನು ಕೇವಲ ಜಾನಪದ ತಜ್ಞ ಅಥವಾ ಜಾನಪದ ವಿದ್ವಾಂಸ ಎಂದು ಸಿಮೀತಗೊಳಿಸುವುದು ಅಷ್ಟೊಂದು ಸರಿಯಲ್ಲ. ಇವರು ಕಥೆ, ಕಾದಂಬರಿ, ಕವಿತೆ, ಜೀವನ ಚರಿತ್ರೆ, ನಾಟಕ–ಗೀತ ನಾಟಕ, ಅನುವಾದ ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಸಾಹಿತ್ಯ ಕೃಷಿ ಗೈದಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿ ವಿವಿಧ ಮುಖವಾಗಿ ಕಾರ್ಯಮಾಡಿದ ಕನ್ನಡಪರ ದುಡಿದ ಡಾ. ಹಕಾರಿಯವರು ೭–೪–೨೦೦೭ ರಂದು ತೀರಿಕೊಂಡರು.

ಜನಪದ ಸಾಹಿತ್ಯ ಕೃಷಿ : ಈ ಕಿರು ಪುಸ್ತಿಕೆಯಲ್ಲಿ ಅವರ ಜಾನಪದ ಚಿಂತನೆಗಳಿಗೆ ಹೆಚ್ಚು ಒತ್ತು ಕೊಡಲಾಗಿದೆ. ಡಾ. ಹಕಾರಿಯವರು ಗ್ರಾಮೀಣ ಪ್ರದೇಶದಿಂದ ಬೆಳೆದುಬಂದವರು. ಶ್ರೀಮತಿ ಕಸ್ತೂರಿದೇವಿಯರೊಡನೆ ಮದುವೆಯಾದ ಮೇಲೆ ಜಾನಪದ ವಿಷಯ ಕುರಿತು ಮತ್ತಷ್ಟು ಕಾರ್ಯಮಾಡಲು ಅನುಕೂಲವಾಗಿರಬೇಕು. ಶ್ರೀಮತಿ ಹಕಾರಿಯವರು ಕೂಡ ಗ್ರಾಮೀಣ ಪ್ರದೇಶದಿಂದ ಬಂದವರು. ಅವರು ಕೂಡ ಜನಪದ ಗೀತೆಯನ್ನು ಬಲು ಸೊಗಸಾಗಿ ಹಾಡುತ್ತಾರೆ. ವಾಸ್ತವವಾಗಿ ಹೇಳಬೇಕೆಂದರೆ ಡಾ. ಹಕಾರಿ ಅವರಿಗೆ ಜನಪದ ಸಾಹಿತ್ಯ ಕೃಷಿಗೆ ಸ್ಫೂರ್ತಿಕೊಟ್ಟವರೆಂದರೆ, ಅವರೇ ಒಂದು ಕಡೆ ದಾಖಲಿಸಿರುವಂತೆ, ನನ್ನ ಎದೆಯಲ್ಲಿ ಜಾನಪದ ಹಣತೆಯನ್ನು ಬೆಳುಗಿಸಿದ ತಾಯಿ ಮಲ್ಲವ್ವ, ತಂದೆ-ಸಿದ್ದಪ್ಪ ಅವರೇ ಕಾರಣ ಎಂದಿದ್ದಾರೆ. ಜೊತೆಗೆ ಶ್ರೀಮತಿ ಕಸ್ತೂರಿದೇವಿಯೂ ಸ್ಫೂರ್ತಿಯಾಗಿದ್ದಾರೆ ಎಂದರೆ ತಪ್ಪಾಗದು.

ಜಾನಪದೀಯ : ವಾಗ್ದೇವಿ ಪುಸ್ತಕಗಳು ಮೈಸೂರಿನಿಂದ ೧೯೮೨ ರಲ್ಲಿ ಪ್ರಕಟವಾದ ಕೃತಿ. ಇದರಲ್ಲಿ ಜಾನಪದ ಸಾಹಿತ್ಯಕ್ಕೆ ಸಂಬಂಧಪಟ್ಟ ಮಹತ್ವದ ವಿಷಯಗಳು ಲಭ್ಯವಾಗುತ್ತವೆ. ಉದಾ: ಮಾನವಿಕ ಶಾಸ್ತ್ರದ ದೃಷ್ಟಿಯಿಂದ: ಒಂದು ಜನಪದ ಪುರಾಣ ಕಥೆ , ಜನಪದ, ತ್ರಿಪದಿ-ಸಾಹಿತ್ಯದಲ್ಲಿ ಮಕ್ಕಳು , ಗಾಣಿಗರು , ಡೊಂಬರು , ಕುಂಬಾರ ಮುಂತಾದ ಒಟ್ಟು ಎಂಟು ಲೇಖನಗಳು ಇದರಲ್ಲಿ ಸಂಕಲಿತಗೊಂಡಿವೆ. ಇದರಲ್ಲಿ ಬರುವ ಒಂದು ಜನಪದ ಪುರಾಣ ಕಥೆ, ಗಂಗವ್ವ-ಗೌರವ್ವ ಎನ್ನುವುದು ಮಾನವಿಕ ಶಾಸ್ತ್ರದ ದೃಷ್ಟಿಯಿಂದ ಬಹಳ ಮಹತ್ವ ಪಡೆದುಕೊಂಡಿದೆ. ಈ ಕಥೆಯೂ ಅಪ್ಪಟ ಜಾನಪದೀಯ ಹಿನ್ನೆಲೆಯಲ್ಲಿ ಮೂಡಿಬಂದಿದೆ. ಗಂಗವ್ವ-ಗೌರವ್ವ ಕಥೆ ಒಂದು ದೃಷ್ಟಿಯಿಂದ ನೋಡಿದರೆ ಪುರಾತನ ಬದುಕಿನ ಪಳೆಯುಳಿಕೆಯ ಕಥೆ. ಈ ದೃಷ್ಟಿಯಿಂದ ಗಂಗವ್ವ-ಗೌರವ್ವ ಅಷ್ಟೊಂದು ಮಹತ್ವದ ಕಥೆ ಅಲ್ಲವಾದರೂ ಮನುಷ್ಯ ತಾನು ವಿವಿಧ ಹಂತಗಳಲ್ಲಿ ಹೇಗೆ ಒಪ್ಪಂದಮಾಡಿಕೊಂಡ ಅನ್ನುವ ಪೂರ್ವಕಾಲದ ಇತಿಹಾಸದ ಕಥೆ ಆಗಿದೆ

ಎನ್ನಬಹುದು. ಈ ಕಥೆಯಲ್ಲಿ ಪುರಾಣದ ಇಣಕು ನೋಟವಿದ್ದರೂ ಇದರಲ್ಲಿ ಅನೇಕ ವಾಸ್ತವ ಜೀವನದ ಸಂಗತಿಗಳಿವೆ.

ಗಂಗವ್ವ ಗೌರವ್ವ ಈ ಜನಪದ ಪುರಾಣ ಕಥೆಯನ್ನು ಡಾ. ಹಕಾರಿಯವರು ಸಣ್ಣವರಿದ್ದಾಗ, ಅವರ ಹಳ್ಳಿ ಚಿಕ್ಕೇನಕೊಪ್ಪದ ಮನೆಮನೆಗೆ ದಾಸರು ಹಾಡುತ್ತ ಬರುತ್ತಿದ್ದರು. ಆಗ ಅವರು ಗಂಗೆ-ಗೌರಿಯರು-ಜಗಳ ಮಾಡುವರೆ ಎಂಬ ಹಿನ್ನೆಲೆಯಲ್ಲಿ ಆರಂಭವಾಗುತ್ತಿದ್ದ ಹಾಡು ಎಂದು ಅವರು ಉಲ್ಲೇಖಿಸಿದ್ದಾರೆ.

ಹಾಗೂ ಹೀಗೂ ಮುಂದುವರೆದ ಗಂಗವ್ವ-ಗೌರವ್ವ ಕಥೆ ಕೊನೆಗೆ ನೀರಿನ ಬರ; ಗೌರಿ-ಗಂಗೆ ಹತ್ತಿರ ಬರುವುದು; ಇಬ್ಬರೂ ರಾಜಿಯಾಗಿ ಕೂಡಿ ಒಗೆತನ ನಡೆಸುವುದು ಇತ್ಯಾದಿ ಘಟನೆಗಳು ಇದರಲ್ಲಿ ಬರುತ್ತವೆ. ಆದರೆ ಗಂಗವ್ವ-ಗೌರವ್ವ ಕಥೆಯಲ್ಲಿ ಮುಖ್ಯವಾಗಿ ಬರುವ ಗಾದೆ ಮಾತುಗಳು, ಒಗಟುಗಳು ಇತ್ಯಾದಿ ಪೂರಕ ಅಂಶಗಳು ಸೇರಿಕೊಂಡು ಈ ಕಥೆಯನ್ನು ಸುಂದರಗೊಳಿಸುತ್ತವೆ. ನಾಚಿನೀರಾಗುವುದು ಒಂದು ನುಡಿಗಟ್ಟು. ಆದರೆ ಗಂಗೆಯನ್ನು ಶಿವನು ಮುಟ್ಟಿ ಆಣೆಮಾಡಲು ಹೋದಾಗ ಅವಳು ನಾಚೀರಾಗುವುದು ವಿಶೇಷವಾಗಿದೆ. ಜಳಕಮಾಡಲು ನೀರಿಲ್ಲದಾಗ ಗೌರಿ ಹೊರಗಾಗಿದ್ದ ಸಂದರ್ಭದಲ್ಲಿ ಬಹಳ ವಿಚಿತ್ರವಾಗಿ ಗೌರವ್ವನ ಬಾಯಿಂದಲೇ ಗಂಗಮ್ಮನ ಹ್ಯಾಂಗರ್ರೇ ಕರಕೊಂಡ ಬರ್ರೀ ಎಂದು ಹೇಳುವುದು ಗೌರವ್ವ ಯಪ್ಪಾ, ಕೇರಿ ಮ್ಯಾಲೆ ಕೆರೀ ಕಟ್ಟೇತಿ. ಕೆರೀ ಮ್ಯಾಲೆ ಮರಾ ಹುಟ್ಟೇತಿ ಎಂದು ಗೌರವದಿಂದಲೇ ಗಂಗವ್ವನನ್ನು ಕರೆತರಬೇಕು ಎನ್ನುವ ಬೇಡಿಕೆ ಬರುವುದು ಮತ್ತು ಅದಕ್ಕೆ ಶಿವನು ಒಪ್ಪದಿರುವುದು ಎಲ್ಲ ಸರಳ ಕಥಾನಕದ ಮಾದರಿ ಇದೆ ಪೆದ್ದಟ್ಟಿ ಊರ ಮುಂದ ಹಳ್ಳ, ಹಳ್ಳದ ದಂಡೆಯ ತೋಟ ಬಾರಿಗಿಡ, ಗಿಳಿ, ಹಕ್ಕಿ, ಬೆಟ್ಟ, ಗವಿ, ಕೆರೆ, ಬಾವಿ ಇತ್ಯಾದಿ ಸೇರಿದರೆ ಅರಮನೆ ಆಯಿತು. ಈ ಕಥೆಯ ಪೌರಾಣಿಕ ಆವರಣಗಳನ್ನು ಕಳಚಿ ನೋಡಿದಾಗ ನಮಗೆ ಕಾಣುವುದು ದನಕರುಗಳ ಪಾಲನೆಯನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡು ಬದುಕಿದ ಒಂದು ಜನಪದ ವೃಂದ, ಅದುವೇ ಕಾಡುಗೊಲ್ಲರು ಎನ್ನುವುದು ಸ್ಪಷ್ಟ.

ಒಂದು ಕಾಲಕ್ಕೆ ನಡೆದಿರಬಹುದಾದ ಘಟನೆಯೊಂದು ಇಂಥ ಕಥೆಯ ರಚನೆಗೆ ಪ್ರೇರಕವಾಗಿರಲು ಸಾಧ್ಯ. ಈ ಕಥೆಯಲ್ಲಿ ಬರುವ ಗಂಗವ್ವ ಅನ್ನುವ ಹೆಸರಿನ ಜಾಡು ಹಿಡಿದು ನೋಡಿದಾಗ, ಅನೇಕ ಸುಂದರ ದೃಶ್ಯಗಳು ಕಾಣುತ್ತವೆ. ಶಿವನ ರೂಪಕ್ಕೆ ಮರುಳಾದ ಗಂಗೆ ನಾಚಿ ನೀರಾಗಿ ಶಿವನ ಜಡೆಯಲ್ಲಿ ಅಡಗುವುದು, ಗೌರವ್ವನಿಗೆ ತಳಮಳವಾಗುವುದು ಇದೆಲ್ಲ ಸಹಜವೆ. ಈ ದೃಷ್ಟಿಯಿಂದ ಗಂಗೆ–ಗೌರವ್ವ ಕಥೆ ಅಪ್ಪಟವಾಗಿ ಪೌರಾಣಿಕ. ಪೌರಾಣಿಕ ಪರಿಸರದಲ್ಲಿ ನಿರ್ಮಿತವಾಗಿದ್ದರೂ ಸರಳ ಕಥೆಯಂತಿದೆ. ಈ ದೃಷ್ಟಿಯಿಂದ ಇದನ್ನು ಓದಿದಷ್ಟು ಹೊಸ ಹೊಸ ಅರ್ಥ ಹೊರಡಬಹುದು.

ಈ ಕೃತಿಯಲ್ಲಿಯೇ ಬರುವಂಥ ಏಕತಾರಿ ಹಾಡುಗಳು ಸರಳವಾಗಿವೆ.

ನೀರಲ ಕೇರಿ ತಾತ ಎನ್ನುವ ಇನ್ನೊಂದು ಹಾಡನ್ನು ನೋಡೋಣ. ಯಾತರಿಂದಲಿ ಮಾಡಲಿ ಆತ್ಮನ ಪೂಜೆ ಎನ್ನುವ ಆತ್ಮನನ್ನು ಪೂಜಿಸುವ ವಿಧಾನ ಸುಂದರವಾಗಿದೆ. ಮನಸ್ಸು ಮದಿಸಿದ ಕೋಣ, ಅದರ ಓಡಾಟ, ಇಂದ್ರಿಯ ಚಾಪಲ್ಯಗಳು, ಎಲ್ಲವನ್ನು ನಿರಸನಗೊಳಿಸಿ ಏರಿ ಮುಂದುವರೆಯುತ್ತದೆ. ಆದ್ದರಿಂದ ಈ ತಿರುವಿಗೆ ಅನುಭಾವ ಅನಭವ ಇತ್ಯಾದಿಗಳು ಬಂದು ಕೂಡುವುದು ಆಶ್ಚರ್ಯಕರವಾಗಿ ಕಾಣುತ್ತದೆ.

ಓಮೆಂದು ಕುಟ್ಟಬೇಕು, ಸೋಮೆಂದು ಬೀಸಬೇಕು
ಓಮ್ ಸೋಮೆರಡು ತಿಳಿಯಬೇಕಾ ನಾರೀ
ಹಾಕವ್ವ ಏರಿ:
ಓಮ್ ಸೋಮೆರಡು ಅಕ್ಷರ ತಿಳಿದರ
ಗುರುಮನಿ ಕೀಲಿ ದೊರಕಿತೌ ನಾರಿ:
ಹಾಕವ್ವ ಏರಿ:

ಎನ್ನುವಲ್ಲಿ ಜೀವನ ತನ್ನ ಪೂರ್ಣ ಅರ್ಥಪಡೆದುಕೊಳ್ಳುತ್ತದೆ. ಅಲೆಮಾರಿಗಳು ಮತ್ತು ಬುಡಕಟ್ಟುಗಳು ಎನ್ನುವ ಲೇಖನದಲ್ಲಿ ಬುಡಕಟ್ಟು ಎನ್ನುವುದು

ಇಂಗ್ಲೀಷಿನ Tribe ಪದದ ಸಂವಾದಿ ಪದ. ಒಂದು ಬುಡದ ಒಳಪಾಡಾದ ಸಮೂಹ ಅಥವಾ ಸಮುದಾಯ. ಕಾರಣ ಇದರಲ್ಲಿ ಡೊಂಬರು ಮತ್ತು ಲಮಾಣಿಗಳು ಬಹಳ ಮುಖ್ಯರಾಗುತ್ತಾರೆ. ವಿಶಾಖಪಟ್ಟಣದಿಂದ ೫೦ ರಿಂದ ೮೦ ಮೈಲೂ ದೂರದ ಗುಡ್ಡದ ಪ್ರದೇಶದಲ್ಲಿ ವಾಸವಾಗಿರುವ ಡೊಂಬರು, ಲಮಾಣಿಗಳು ಮೂಲ ದ್ರಾವಿಡ ಜನಾಂಗಕ್ಕೆ ಸೇರಿದ ಒಂದು ಅಲೆಮಾರಿ ಸಮುದಾಯ. ಅದರಂತೆ ಕುಂಬಾರ ಕುರಿತ ಲೇಖನದಲ್ಲಿ ಬಹುಶ: ವಿಶ್ವಕರ್ಮರು ಮತ್ತು ಕುಂಬಾರರು ಒಂದು ವರ್ಗಕ್ಕೆ ಸೇರಿದವರಿರಬೇಕು ಎಂದು ವಿಚಾರಿಸಲಾಗಿದೆ. ಹೀಗಾಗಿ ಕುಂಬಾರ ಎನ್ನುವುದು ಕೇವಲ ಕೃಷಿ ಇತ್ಯಾದಿ ಮಾಡಿಕೊಂಡಿದ್ದ ನಂತರದ ಹಂತದಲ್ಲಿ ಇವರು ರೂಪತಾಳಿದರೆಂದು ಕಾಣುತ್ತದೆ. ಅದರಂತೆ ಗಾಣಿಗ ಸಮುದಾಯವು ಕೂಡ ಮುಂದೆ ಬರುವುದು. ಶ್ರಮ ಸಂಸ್ಕೃತಿಯ ಹಿರಿಮೆಯನ್ನು ಸೇವಾಲಾಲ ಮುಖಾಂತರ ಸಾರಿದ ಲಮಾಣಿಗಳು ಬಹಳ ಮುಖ್ಯರಾಗುತ್ತಾರೆ. ಇಲ್ಲಿಂದಲೇ ಎಲ್ಲ ಜನಪದ ಗುಂಪುಗಳು ರೂಪುಗೊಂಡವು ಎನ್ನುವುದು ಸೂಕ್ತ.

ಗರತಿಯ ಹಾಡುಗಳಲ್ಲಿ ಕೌಟುಂಬಿಕ ಜೀವನ ಚಿತ್ರಣ : ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗ ವಿಸ್ತರಣ ಮಾಲೆಯ ಮುಖಾಂತರ ೧೯೭೫ ರಲ್ಲಿ ಪ್ರಕಟಮಾಡಿದ ಕೃತಿ. ಭಾರತೀಯ ಸಾಮಾಜಿಕ ಜೀವನದಲ್ಲಿ ಇಂದಿಗೂ ಕುಟುಂಬ ಪದ್ಧತಿ ಚಿನ್ನದ ಚೌಕಟ್ಟಾಗಿದ್ದು ನಮ್ಮ ಜನಪದ ಸಾಹಿತ್ಯದ ಜಾಯಮಾನಗಳ ವಿಭಿನ್ನತೆಯನ್ನು ಎತ್ತಿ ತೋರಿಸಬಹುದಾಗಿದೆ. ಈ ಕೃತಿಯಲ್ಲಿ ಗಂಡ–ಹೆಂಡತಿ, ಸರಸ–ವಿರಸ, ಬಸಿರು–ಬಯಕೆ, ತಾಯಿ–ಕೂಸು, ತವರು–ಲಾಲಿ, ಸಮರಸ–ಒಲವು, ದಾಂಪತ್ಯ–ಪೂಜೆ, ತಾಯಿ–ತಂದೆ, ಅಣ್ಣ, ತಂಗಿ, ತಮ್ಮ, ಮೈದುನ ಭಕ್ತಿ ಅನುಭಾವ ಮುಂತಾದ ಇಪ್ಪತ್ತೇಳು ಪ್ರಕರಣಗಳಿವೆ.

ಜಾನಪದ ಮೂಲಭೂತ ತತ್ವಗಳು:

ಈ ಕೃತಿ ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಲ ಮೂರು ಸಾವಿರಮಠ, ಹುಬ್ಬಳ್ಳಿಯಿಂದ ೧೯೮೩ ರಲ್ಲಿ ಪ್ರಕಟವಾಗಿದೆ. ಭಾಗ–

೧ ರಲ್ಲಿ (ಹಿನ್ನೆಲೆ) ಜಾನಪದ ಅಧ್ಯಯನದ ಸ್ವರೂಪ-ವ್ಯಾಪ್ತಿ, ಜಾನಪದ ಮತ್ತು ಇತರ ವಿಜ್ಞಾನಗಳು, ಜಾನಪದ ಕ್ಷೇತ್ರಕಾರ್ಯ ವಿಧಾನಗಳು ಮತ್ತು ಸಿದ್ಧಾಂತಗಳು ಈ ಕೆಲವು ವಿಷಯಗಳು ಒಳಗೊಂಡಿವೆ. ಭಾಗ-೨ ನೆಲೆಯಲ್ಲಿ ಭೌಗೋಲಿಕ ಪ್ರಾದೇಶಿಕ ತತ್ವ, ಜನಾಂಗಿಕ ಕ್ರಿಯಾತತ್ವ, ಭಾಷಾ ಸಾಹಿತ್ಯ ತತ್ವ ಮುಂತಾದವುಗಳು ಚರ್ಚಿತವಾಗಿವೆ.

ಡಾ. ಹಕಾರಿಯವರು ಜಾನಪದ ಅಧ್ಯಯನದ ಹಿನ್ನೆಲೆ ಕುರಿತು ಹೇಳುವಾಗ, ಜಾನಪದ ಅಧ್ಯಯನ ಇತ್ತೀಚೆಗೆ ಜಾನಪದ ವಿಜ್ಞಾನವಾಗಿ ರೂಪುಗೊಂಡಿದೆ. ೧೯೧೨ ರಲ್ಲಿ ಗ್ರಿಮ್ ಸಹೋದರರು ಪ್ರಕಟಿಸಿದ ಕಿನ್ನರ ಕಥೆಗಳು ಪಾಪ್ಯೂಲರ್ ಆ್ಯಂಟಿಕ್ವಿಟೀಜ್; ವಾಲ್ಸ್‌ಕುಂದೆ , ಮಾರ್ಶನ್ , ಸಾಗಾ , ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತಿದ್ದ ಜನಪದ ಸಾಹಿತ್ಯ ಅನೇಕ ಕಾರಣಗಳಿಂದ Finafache Formen ಎಂದು ಕರೆಯಲ್ಪಟ್ಟು ವಿಶೇಷವಾಗಿ ಫಿನ್‌ಪೊಸೆ ಫೋರ್ಮ ಪ್ರಕಟಗೊಂಡ ಬಳಿಕ ಎಲ್ಲ ಭಾಗದ ವಿದ್ವಾಂಸರ ಕಣ್ಣು ತೆರೆಯಿಸಿತೆಂದು ಕಾಣುತ್ತದೆ. ಕನ್ನಡದ ಮಟ್ಟಿಗೆ ಜಾನಪದವನ್ನು ಬಹಳ ಗಂಭೀರವಾಗಿ ಅಧ್ಯಯನ ಮಾಡಿದವರೆಂದರೆ ಡಾ. ಹಾ.ಮಾ.ನಾ, ಡಾ. ಜೀ.ಶಂ.ಪ. ಮುಂತಾದವರು. ಅದರ ಜೊತೆಗೆ ಡೆನ್ಮಾರ್ಕದ ಆಕ್ಸಲ್, ಒಲ್‌ರೇಕ, ಜರ್ಮನಿಯ ಮ್ಯಾಕ್ಸಮುಲ್ಲರ, ಥೀಯೋಡರ್ ಬೆನ್ಫೆ ಮುಂತಾದವರು ತಮ್ಮ ಗಮನ ಹರಿಸಿದರು. ೧೮೮೨ ರಲ್ಲಿ ಫ್ರಾನ್ಸಿಸ್ ಜೆ. ಚೈಲ್ಡ್ ಎನ್ನುವವರು ಇಂಗ್ಲಂಡ್ ಸ್ಕಾಟಲ್ಯಾಂಡ್ ಬ್ಯಾಲೆಡ್ ಎನ್ನುವ ಕೃತಿ ಪ್ರಕಟಿಸಿದರು. ೧೮೮೮ ರಲ್ಲಿ ಅಮೇರಿಕಾದ ಫೋಕಲೋರ್ ಸೊಸಾಯಿಟಿ, ೧೮೯೮ ಕ್ಕೆ ಇಂಗ್ಲಂಡದಲ್ಲಿ ಫೋಕ್ ಪತ್ರಿಕೆ ಆರಂಭಿಸಿತು. ಅದುವರೆಗೂ ಪಳೆಯುಳಿಕೆಗೆ ಮಾತ್ರ ಸೀಮಿತವಾದ ಫೋಕಲೋರ್ ಪದ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುತ್ತ ನಡೆಯಿತು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಜಾನಪದ ಮತ್ತು ಇತರ ವಿಜ್ಞಾನಗಳು ಎಂಬ ಲೇಖನದಲ್ಲಿ ಅನೇಕ ಶಾಸ್ತ್ರಗಳು ಮುಖ್ಯ ಕಥಾನಕ (ಅಖ್ಯಾಯಿಕೆ)ಗಳ ಅಧ್ಯಯನದಲ್ಲಿ ಭಾಷಾ ವಿಜ್ಞಾನ,

ಪಳೆಯುಳಿಕೆಗಳ ಅಧ್ಯಯನದಲ್ಲಿ ಭೂಗರ್ಭಶಾಸ್ತ್ರ, ರಸಾಯನಶಾಸ್ತ್ರ, ಪ್ರಾಚ್ಯವಸ್ತುಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಸಾಂಸ್ಕೃತಿಕ ಮಾನವಶಾಸ್ತ್ರ, ಪುರಾಣ, ಹಾಡು, ಆರಾಧನೆಗಳ ಅಧ್ಯಯನದಲ್ಲಿ ಧರ್ಮ-ನೀತಿ, ಕಲೆ, ಮನೋವಿಜ್ಞಾನ ಮತ್ತು ತಾಂತ್ರಿಕ ವಿಜ್ಞಾನ ಹೀಗೆ ಜಾನಪದದ ಸಾಮಗ್ರಿಗಳ ಅಧ್ಯಯನಕ್ಕೆ ಸಮಗ್ರವಾಗಿ ಅಲ್ಲವಾದರೂ ಈ ಎಲ್ಲ ಶಾಸ್ತ್ರಗಳ ತೀರ್ಮಾನಗಳ ಆಂಶಿಕ ನೆರವನ್ನು ಅವಲಂಬಿಸುವುದು ಅಗತ್ಯ ಮತ್ತು ಅನಿವಾರ್ಯವಾಗುತ್ತದೆ ಎಂದು ಡಾ. ಹಕಾರಿಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ.

ಜಾನಪದ-ಕ್ಷೇತ್ರಕಾರ್ಯ-ವಿಧಾನಗಳು ಮತ್ತು ಸಿದ್ಧಾಂತಗಳನ್ನು ಕುರಿತು ಹೇಳುವಾಗ ಜಾನಪದ ಕ್ಷೇತ್ರ ಕಾರ್ಯದ ಪ್ರಥಮ ಅವಶ್ಯಕತೆ, ಜಾನಪದ ಸಾಮಗ್ರಿಗಳ ಸಂಗ್ರಹಣೆ ; ನಂತರ ವರ್ಗೀಕರಣವನ್ನು ಆಧರಿಸಿ ವಿಶ್ಲೇಷಣೆ. ಇದುವರೆಗೂ ವಿದ್ವಾಂಸರು ಗಮನಿಸಿದಂತೆ ಈ ದಿಶೆಯಲಿ ಮೊಟ್ಟ ಮೊದಲು ಕಾರ್ಯ ಕೈಕೊಂಡವರು ಸ್ವೀಡನ್ ದೇಶದ ಆರ್ಚ ಬೀಷ್‌ಪ್ ಒಲಾನ್ಸ್ ಮ್ಯಾಗ್ನಸ್ . ಅವರ ಸಂಗ್ರಹಣೆ ಗ್ರಾಮೀಣ ರೈತರ ಬದುಕಿಗೆ ಸಂಬಂಧಿಸಿದ ವಸ್ತುಗಳಿಗೆ ಸೀಮಿತವಾಗಿತ್ತು. ಆ ಬಳಿಕ ಗುಸ್ತಾವಸ್ ಅಡೊಲ್ಫಸ್ ೧೬೩೦ ರಲ್ಲಿ ಒಂದು ಆದೇಶ ಹೊರಡಿಸಿ, ಸ್ವೀಡಿಶ್ ದೇಶದ ಸಂಸ್ಕೃತಿಯ ವಿವಿಧ ಮುಖದ ವಸ್ತುಗಳ ಅನ್ವೇಷಣೆಗೆ ಆದೇಶವಿತ್ತನು. ಇದರ ಅಂಗವಾಗಿ ಪ್ರಾಚೀನ ಕಟ್ಟಡದ ಮಾದರಿ, ಸಾಂಪ್ರದಾಯಿಕ ವಿಧಿ ನಿಷೇಧ, ವೀರಗಾಥೆ, ಐತಿಹ್ಯ, ಲಾವಣಿ, ಧಾಟಿ, ಅರ್ಚನೆ ಇತ್ಯಾದಿಗಳ ಮೂಲಕ ರೂಢಿಯಲ್ಲಿದ್ದ ಸಾಮಾಜಿಕ ಕಟ್ಟಳೆ ನಿಯಮಗಳು, ಪರಂಪರೆಗಳು, ಕೌಟುಂಬಿಕ, ಸಾಮಾಜಿಕ ನೆಲೆಯ ಲೆಕ್ಕ ಪದ್ಧತಿ ಮುಂತಾದವುಗಳನ್ನು ಹೇಳಿದ್ದಾರೆ. ಈ ದಿಶೆಯಲ್ಲಿಯೇ ಕಾರ್ಯ ಮಾಡಿದವರಲ್ಲಿ ದಾಖಲುಗೊಳಿಸುವಂಥ ಇತರ ವ್ಯಕ್ತಿಗಳೆಂದರೆ ಹಿಟ್ಟನ್ ಕೆವಲಿಯಸ್, ಹೆಸೆಲಿಯಸ್ ಟೈಲರ್, ಲಾಂಗ್, ಫ್ರೇಜರ್ ಮುಂತಾದವರು ತಮ್ಮ ಹೊಸ ಆಲೋಚನೆಗಳಿಂದಾಗಿ ಕ್ಷೇತ್ರಕಾರ್ಯಕ್ಕೆ ಅಧಿಕ ವೈಜ್ಞಾನಿಕ ಸ್ವರೂಪ ಒದಗಿಸಿದರು ಎಂದಿದ್ದಾರೆ. ಭಾರತೀಯ ದೃಷ್ಟಿಯಿಂದ

ಕನ್ನಡ ಜಾನಪದ ಮೂಲಭೂತ ತತ್ವಗಳನ್ನು ಹೀಗೆ ಸೂಚಿಸಬಹುದು, ಎಂದು ವರ್ಗೀಕರಣದ ಮೂಲಕ ವರ್ಗೀಕರಿಸಿದ್ದಾರೆ.

೧. ಭೌಗೋಲಿಕ ಪ್ರಾದೇಶಿಕ ತತ್ವ.
೨. ಜನಾಂಗಿಕ ಕ್ರಿಯಾ ತತ್ವ.
೩. ಭಾಷಾಸಾಹಿತ್ಯ ತತ್ವ (ಶಾಬ್ದಿಕ ಕಲೆ ಅಥವಾ ಶ್ರವ್ಯ ಕಲಾ ತತ್ವ.)
೪. ಧರ್ಮಕಲಾ ತತ್ವ (ದೃಶ್ಯ ಕಲೆ).
೫) ಸಂಸ್ಕೃತಿ ಸಂವಹನ ತತ್ವ.

ಮೇಲಿನ ವರ್ಗೀಕರಣವನ್ನು ಗಮನಿಸಿದಾಗ ಮೊದಲನೆಯದರಲ್ಲಿ ಭೌಗೋಳಿಕ ಪಾತಳಿ, ಪ್ರದೇಶ, ಪರಿಸರ, ನೆಲ, ಜಲ, ಗಾಳಿ, ಬೆಂಕಿ ಇತ್ಯಾದಿ ಹಲವು ಕೂಡಿಕೊಳ್ಳುತ್ತವೆ. ಎರಡನೆಯದರಲ್ಲಿ ಆದಿ ಮಾನವನಿಂದ ಹಿಡಿದು ಬುದ್ಧಿ ಮಾನವನವರೆಗಿನ ವಿಷಯಗಳಿವೆ. ಇದಕ್ಕೆ ಜನಾಂಗಿಕ ಕ್ರಿಯಾತತ್ವ ಎಂದು ಹೇಳಬಹುದು. ಇದರಲ್ಲಿ ಅಲೆಮಾರಿ, ಅರೆ ಅಲೆಮಾರಿ, ಪಂಗಡ ಬುಡಕಟ್ಟು, ಕುಲಗುಂಪು, ನೆಲೆ, ವಸತಿ, ಪರಿಚಲನೆ, ವಿನ್ಯಾಸ ಇತ್ಯಾದಿಗಳೂ ಸೇರಿ ಜನಾಂಗದ ಅಗತ್ಯವನ್ನು ಪೂರೈಸುವ ಸಾಧನವಾಗುತ್ತವೆ. ಮೂರನೆ ಭಾಷಾ ಸಾಹಿತ್ಯ ತತ್ವದಲ್ಲಿ ಮೌಖಿಕ ಪರಂಪರೆಯಿಂದ ಹಿಡಿದು ಭಾಷಾ ಚಾಕ್ಷುಕರೂಪ, ಆಡುನುಡಿ, ಪ್ರದೇಶ ವಿತರಣೆ, ಸ್ಥಳನಾಮ, ವ್ಯಕ್ತಿನಾಮ, ಕಟಕಿ, ನಿಂದೆ, ಬೈಗುಳ ಇತ್ಯಾದಿಗಳು ಸೇರಿ, ಭಾಷಾ ಸಾಹಿತ್ಯ ತತ್ವ (ಶಾಬ್ದಿಕ ಕಲೆ) ಗಳನ್ನು ರೂಪಿಸುತ್ತವೆ. ಇದೆ ರೀತಿಯಾಗಿ ನಾಲ್ಕನೆಯ ಧರ್ಮಕಲಾ ತತ್ವದಲ್ಲಿ ವಿಸ್ಮಯ ಸಂಘರ್ಷ, ನಿಸರ್ಗದ ರುದ್ರ ರಮಣೀಯ ರೂಪ, ಮಂತ್ರ, ಮಾಟ, ಅರ್ಚಕರು, ಕಾರಣಿಕರು ಹರಕೆ, ವಿವಿಧ ಕಲಾರೂಪಗಳು ಮುಂತಾದವು ಸೇರಿ ಧರ್ಮಕಲಾ ರೂಪಕ್ಕೆ ಒಂದು ತತ್ವ ಕೊಡುತ್ತವೆ. ಆಗ ಧರ್ಮವೆ ಒಂದು ಕಲೆ ಆಗುತ್ತದೆ. ಐದನೆಯ ಸಂಸ್ಕೃತಿ ಸಂವಹನ ತತ್ವದಲ್ಲಿ ಭೌತಿಕ ಸಂಸ್ಕೃತಿ, ಆಧ್ಯಾತ್ಮಿಕ ಸಂಸ್ಕೃತಿ, ಸಾಂಸ್ಕೃತಿಕ ದಾಳಿ, ಪರಿಣಾಮ, ಪ್ರಭಾವ ಸಂಸ್ಕೃತೀಕರಣ ನಿರಾಕರಣ, ಸ್ವೀಕರಣ, ವಿಶ್ವಸಾಮ್ಯ ಇತ್ಯಾದಿ ಸೇರಿ ಸಂಸ್ಕೃತಿ ಸಂವಹನ ತತ್ವಕ್ಕೆ ಒಂದು ಗಟ್ಟಿರೂಪ

ಕೊಡುತ್ತದೆ. ಹೀಗಾಗಿ ಸ್ಥಿರವಸತಿಯ ಕಲ್ಪನೆ ಬರುವವರೆಗೆ ಅಲೆಮಾರಿಗಳಾಗಿದ್ದ ಜನಪದ ಗುಂಪುಗಳು ಒಂದು ಕಡೆ ವಾಸಮಾಡುವ ಕಲ್ಪನೆ ಬಂದ ಬಳಿಕ ಕುಟುಂಬ ಇತ್ಯಾದಿ, ಕೌಟುಂಬಿಕ ಸ್ವರೂಪದ ಹಿನ್ನೆಲೆಯಾಗಿ ವಿವಿಧ ಹಂತದ ಕಟ್ಟುಕಟ್ಟಳೆ, ರೂಢಿಗಳು ಪ್ರತಿಯೊಂದು ಜನಪದ ವೃಂದಗಳನ್ನು ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಮುನ್ನಡೆಸಲು ಪ್ರೇರಕವಾದವು.

ಸಮಾಜವೆಂದರೆ ಮಾನವ ಸಮುದಾಯ. ಆದರೆ ಎಲ್ಲ ಸಮುದಾಯಗಳು ಏಕಸೂತ್ರದಲ್ಲಿ ಬಂಧಿತವಾಗಿರುವುದಿಲ್ಲ. ಜನಗಳ ಒಂದು ಗುಂಪು ಸಮಾಜ. ಅವರ ನಡವಳಿಕೆಯ ರೀತಿಯೇ ಅವರ ಸಂಸ್ಕೃತಿ. ಆದ್ದರಿಂದ ಭೌತಿಕ ಸಂಸ್ಕೃತಿ ಜೊತೆಗೆ ಅನೇಕ ಸಾಮಾಜಿಕ ಅಂಶಗಳು ಸೇರಿಕೊಂಡು ಸಂಸ್ಕೃತಿ ಸಂವಹನ ತತ್ವಕ್ಕೆ ಒಂದು ರೂಪ ಕೊಟ್ಟವು. ಅದರಂತೆ ಧರ್ಮಕಲಾ ತತ್ವವೂ ಕೂಡ ಜನಪದ ಧರ್ಮವನ್ನು ಕಲೆಯ ರೂಪಕ್ಕೆ ಎತ್ತರಿಸಿದ ಹಂತವಾಯಿತು. ಕುಲಸಂಕೇತವೇ ಇಲ್ಲಿ ಆರಾಧನೆಯ ವಸ್ತುವಾಗುತ್ತದೆ. ಕುಲದೇವತಾ ಆರಾಧನೆ ಎಂದು ಇದನ್ನು ಕರೆಯಬಹುದಾಗಿದೆ ಎಂದಿದ್ದಾರೆ.

ಆದಿಮಾನವರಲ್ಲಿ ಕೆಲವರು ಪ್ರಾಥಮಿಕ ಹಂತದ ಬೇಟೆಗಾರಿಕೆಯನ್ನು ತೊರೆದು ಅವಲಂಬಿಸಿದ ವೃತ್ತಿಗಳೆಂದರೆ ಕುರಿ ಅಥವಾ ಗೋವು ಸಾಕಣೆ, ಒಕ್ಕಲುತನ ಇತ್ಯಾದಿ. ಇದರಲ್ಲಿ ವಿಧಿ ನಿಷೇಧಗಳು ಸೇರಿಕೊಳ್ಳುತ್ತವೆ. ಇರೋಕ್ವಸ್ ದ ಓರೆಂಡಾ, ಸಿಯೋಕ್ಸದ ಆತ್ಮದ ಅರ್ಥವನ್ನು ಒಳಗೊಂಡಿವೆ. ಎಲ್ಲವೂ ಇದಕ್ಕೆ ಬಾಗಿ ಭಯಕ್ಕೆ ಒಳಗಾಗಿ ಬಾಳಬೇಕು ಎನ್ನುವುದು ಇದರ ಒಳ ಅರ್ಥವಾಗಿರಬೇಕು. ಟೊಂಗಾ ಭಾಷೆಯ ಮಿರಾಕಿಲ್ ಎನ್ನುವ ಪದದ ಅರ್ಥ ಮೌನ ಎಂದು ಕೊಡಲಾಗಿದೆ. ಮೌನ ಎಂದರೆ ಒಂದು ಅಘಟಿತ ಘಟನಾ ಸಾಮಾರ್ಥ್ಯವುಳ್ಳ ಶಕ್ತಿ. ಬುಡಕಟ್ಟುಗಳ ಬದುಕಿನಲ್ಲಿ ಅದೊಂದು ವಿಸ್ಮಯಕಾರಿ ವರ್ತನೆಗಳುಳ್ಳ ಪವಾಡ ಶಕ್ತಿ. ಅದಕ್ಕೆ ತಪ್ಪಿ ನಡೆದರೆ ಅದು ಏನು ಬೇಕಾದರೂ ಮಾಡಬಲ್ಲದು ಎನ್ನುವ ಸೂಚನೆ. ಟಾಬು ಎನ್ನುವುದು ಪೋಲಿನೆಷಿಯನ್ ಭಾಷೆಯ ಟಾಬು ಪದದಿಂದ ಬಂದದ್ದು.

ಇದು ಮೌನದ ಇನ್ನೊಂದು ಮುಖ. ಇವೆಲ್ಲ ಕೂಡಿದಾಗ, ಹರಕೆ, ಹಬ್ಬ, ಆಚರಣೆಗಳು ಸೇರಿದಾಗ ಇವೆಲ್ಲ ಸೇರಿ ಸಂಸ್ಕೃತಿ ಸಂವಹನ ತತ್ವಕ್ಕೆ ಒಂದು ಗಟ್ಟಿರೂಪ ಒದಗಿಸುತ್ತವೆ. ಹೀಗಾಗಿ ಎಲ್ಲವೂ ಒಂದೊಂದು ರೀತಿಯಿಂದ ಜನಪದ ಜೀವನವನ್ನು ಗಟ್ಟಿಗೊಳಿಸುತ್ತವೆ. ಕಾರಣ ಇವೆಲ್ಲವೂ ಒಂದಲ್ಲ ಒಂದು ಜನಪದ ಹಾಡಿಗೆ ಲಯವನ್ನು ಧಾಟಿಯನ್ನು ಒದಗಿಸಿಕೊಡುತ್ತವೆ. ದೂರಿ ಹಾಡು, ರಿವಾಯತ ಪದಗಳು ಹೀಗೆ ಒಂದು ಡೊಡ್ಡ ಪಟ್ಟಿಯನ್ನೆ ಕೊಡಬಹುದು. ಈ ಕಾರಣದಿಂದ ಪುರಾಣಿಕರಣಗೊಂಡ ಅಂಶಗಳಲ್ಲಿ ಹುದುಗಿರುವ ವಾಸ್ತವ ಸಂಗತಿಗಳು ಯಾವವು ? ಇದು ಒಂದು ವಿಷಯದ ಪರಿಜ್ಞಾನ ವ್ಯಾಪ್ತಿಗೆ ನಿಲುಕದ ಮಾತು ಎಂದಿದ್ದಾರೆ.

ಆದಿಮಾನವ ಸಂಸ್ಕೃತಿ, ಧರ್ಮ, ಸಮಾಜ, ಮಾನವಶಾಸ್ತ್ರ, ಮನೋವಿಜ್ಞಾನ ಇತ್ಯಾದಿಗಳ ಒಂದು ಸಂಕೀರ್ಣ ನಿಲುವಿನಲ್ಲಿ ನಡೆಯಬೇಕಾಗಿರುವ ಮಹತ್ವದ ಕಾರ್ಯ. ಹೀಗೆ ಇದು ಜಾನಪದ ಅಧ್ಯಯನದ ಮೂಲಭೂತ ತತ್ವಗಳನ್ನು ಕುರಿತು ಮೂಡಿಬಂದಿರುವ ಮಹತ್ವದ ಕೃತಿ ಎಂದು ಹೇಳಬಹುದು.

ಜಾನಪದ ಸಮ್ಮುಖ:

ಈ ಕೃತಿಯಲ್ಲಿ ದೇವರಗುಡ್ಡದ ಮೈಲಾರಲಿಂಗ, ಜನಪದ ಕಲೆಗಳು ಮತ್ತು ಶರಣರು, ಉತ್ತರ ಕರ್ನಾಟಕದ ಸಣ್ಣಾಟಗಳು, ಜನಪದದಲ್ಲಿ ಮಾತೃ ವಾತ್ಸಲ್ಯ, ಜನಪದರು ಕಂಡ ಕಾಳಮ್ಮ ಮತ್ತು ಕಜ್ಜಾಯ, ಕೋರನ್ನ, ಭಿಕ್ಷೆ ಎನ್ನುವ ಎರಡು ಸುಡಿಗಟ್ಟುಗಳು, ಹೀಗೆ ಏಳು ಲೇಖನಗಳ ಸಂಗ್ರಹ ಇದರಲ್ಲಿದೆ. ಜನಪದವನ್ನು ಮೊದಲನೆಯ ಸಾರಿ ಮುಖಾಮುಖಿಯಾಗಿಟ್ಟು ನೋಡಲಾಗಿದೆ. ಇದರಲ್ಲಿ ಜನಪದ ಕಲೆಗಳು ಮತ್ತು ಶರಣರು ಎನ್ನುವ ಲೇಖನ ಕೂಡ ಒಳಗೊಂಡಿದೆ. ಸಣ್ಣಾಟದ ಸ್ವರೂಪವನ್ನು ಕುರಿತು ಬರೆಯುವಾಗ ಕೆಲವು ಆಶ್ಚರ್ಯಕರ ಸಂಗತಿಗಳನ್ನು ವಿವರಿಸಲಾಗಿದೆ. ಮತ್ತೊಂದು : ಎರಡು ಜನಪದ ಹಾಡುಗಳ ಪಲ್ಲವಿಯನ್ನು ತೆಗೆದುಕೊಂಡು ವಿವೇಚಿಸಲಾಗಿದೆ.

ಜಾತಮಲ್ಲಿಗೆ ಜಲುಮಕ ಜೋಡ
ಸವತೀಂಮ್ಯಾಲಿರಲಾರ...

ಇಲ್ಲಿ ತಾನು ಒಂದು ಜಾತಮಲ್ಲಿಗೆ, ಆದರೆ ಅವಳ ಗಂಡನದು ಮಾತ್ರ ಅವಳ ಬಗ್ಗೆ ಅಲಕ್ಷ್ಯ. ಇಂಥದರಲ್ಲಿ ಅವಳ ಗಂಡ ಮತ್ತೊಂದು ಮದುವೆ ಮಾಡಿಕೊಳ್ಳುತ್ತಾನೆ. ಇದೆಲ್ಲ ಸವತಿಯ ಕಾಟ ಮತ್ತು ಗಂಡನ ಅನಾದರಕ್ಕೆ ಕಾರಣವಾಗಿ, ಆ ಹೆಣ್ಣನ್ನು ಮಾನಸಿಕ ಒತ್ತಡಕ್ಕೆ ಈಡುಮಾಡುತ್ತದೆ. ಆಗ ಆಕೆ ಜಾತಮಲ್ಲಿಗೆ ಜಲುಮ್ಹಾಕ ಜೋಡ ಸವತೀಮ್ಯಾಲಿರಲಾರೆ ಎನ್ನುವ ಪಲ್ಲವಿಯನ್ನು ಹಾಡಿ ತನ್ನ ಮನಸ್ಸಿನ ದು:ಖವನ್ನು ಕಡಿಮೆಮಾಡಿಕೊಳ್ಳುತ್ತಾಳೆ. ಇದು ಹೆಣ್ಣಿನ ಸಂಕಟ ತಳಮಳವನ್ನು ಬಗೆಬಗೆಯಾಗಿ ವಿವರಿಸುತ್ತದೆ. ಆದ್ದರಿಂದ ಜಾತಮಲ್ಲಿಗೆ ಜಲುಮಕ ಜೋಡ ಎನ್ನುವ ಪಲ್ಲವಿ ಏಕಜೀವವಾಗಿರುವುದು, ಈ ಪಲ್ಲವಿಯ ವೈಶಿಷ್ಟ್ಯ.

ಹೀಗೆ ಪಲ್ಲವಿಗಳನ್ನು ಜನಪದ ಹಾಡುಗಳನ್ನು ರೂಪದೃಷ್ಟಿಯ ಹಾಡಿನಿಂದ ವಿವೇಚಿಸಿದರೆ ಇನ್ನೂ ಅನೇಕ ಕುತೂಹಲಕಾರಿ ಸಂಗತಿಗಳು ಹೊರಬೀಳುವ ಸಾದ್ಯತೆ ಇದೆ.

ಅದರಂತೆ ಈ ಸಂಗ್ರಹದ ಇನ್ನೊಂದು ಲೇಖನ ಜನಪದದಲ್ಲಿ ಮಾತೃವಾತ್ಸಲ್ಯ ಮತ್ತು ಜನಪದರು ಕಂಡ ಕಾಳಮ್ಮ. ಇವೆರಡು ಲೇಖನಗಳು ನೇರವಾಗಿ ಜನಪದ ಸಾಹಿತ್ಯವನ್ನು ಸಮ್ಮುಖಗೊಳಿಸಿವೆ.

ತಾಯಿ ನನ ಕಾಳಮ್ಮ ತಾಯೇನ ಸಣ್ಣಾಕಿ
ಮೂಗಂಡುಗ್ಹೂವ ಮುಡಿಯಾಗ–ಮಲ್ಲೀಗಿ
ಮಣದಂಥ ದಂಡಿ ಹಣಿಮ್ಯಾಗ

ಎನ್ನುವ ಪದ್ಯ. ಮತ್ತೊಂದು ಪದ್ಯ ಕಾಳಮ್ಮನ ಮೂಗುತಿ!

ಕಾಳಮ್ಮನ ಮೂಗುತಿ ಮೂರು ಲೋಕದ ತೂಕ
ಮೂಗುತಿ ಮುತ್ತು ಗಿರಿತೂಕ ಸಿರಸಂಗಿ
ಕಾಳಮ್ಮ ತೂಕಾ ಯಾ ತೂಕಾ.

ಈ ಪದ್ಯ ಒಗಟಿನಂತೆಯೂ ಕಾಣುತ್ತದೆ. ಈ ರಚನೆಯಲ್ಲಿ ಎರಡು ಸ್ತರಗಳಿವೆ. ಒಂದು : ವಾಕ್ಯ ರಚನೆಯ ಶೈಲಿತತ್ವ ಸ್ತರ, ಎರಡು : ಶಬ್ದಾರ್ಥ ಶಾಸ್ತ್ರಕ್ಕೆ ಸಂಬಂಧಿಸಿದ ಸಂವೇದನಾ ಅಸ್ತ್ರ. ಆ ದೃಷ್ಟಿಯಿಂದ ಮೌಖಿಕ ಪರಂಪರೆಯ ಮೂಲಕ ಸಾಗಿಬಂದ ಭಾಷಾ ಚಾರಿತ್ರಿಕ ಜನಪದ ರಚನೆಗಳ ವಿವೇಚನೆ ಮಾಡುವಾಗ ಬಹಳ ಎಚ್ಚರದಿಂದ ಮಾಡಬೇಕು ಎಂದು ಭಾಷಾಶಾಸ್ತ್ರಜ್ಞರಾದ ಡಾ. ವಿಲಿಯಂ ಮಾಡ್ತಾ ಅವರು ಹೇಳಿದ್ದನ್ನು ಸ್ಮರಿಸಿಕೊಂಡಿದ್ದಾರೆ. ಆದ್ದರಿಂದ ಭಾವದ ಬೆಡಗಿಗೆ ಲಯ, ಧಾಟಿಗಳ ಮೆರಗು ಕೂಡಿದಾಗ ಇಂಥ ರಚನೆಗಳು ಮೂಡಿಬರುವ ಸಾಧ್ಯತೆ ಇದೆ.

ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದು:ಖಾಂತ ನಿರೂಪಣೆ ಒಂದು ಸಾಂಸ್ಕೃತಿಕ ಅಧ್ಯಯನ:

ಇದು ಡಾ. ಹಕಾರಿಯವರ ಪಿಎಚ್.ಡಿ ಮಹಾಪ್ರಬಂಧ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರದಿಂದ ೧೯೮೫ ರಲ್ಲಿ ಪ್ರಕಟಗೊಂಡಿದೆ. ಪರಿವಿಡಿಯಲ್ಲಿ ಪ್ರಬಂಧವ್ಯಾಪ್ತಿ-ಗುರಿ, ಜನಪದ-ಜಾನಪದ, ಜಾನಪದ ವಿಶ್ವಾವ್ಯಾಪಿ-ವಿಶ್ವರೂಪಿ, ಜನಪದ ಗೀತೆಗಳು ಜನಪದ ಕತೆ-ಜನಪದ ಕಥನ ಗೀತೆಗಳು, ಜನಪದ ಕಥನ ಗೀತೆಗಳ ವಸ್ತು-ಪ್ರೇರಣೆ, ದು:ಖಾಂತ ಕಥನ ಗೀತೆಗಳು, ಕಥನ ಗೀತೆಗಳ ಆಯ್ಕೆ ವಿವೇಚನೆಯಲ್ಲಿ ಈರೋಬಿ, ಕೆರೆಗೆಹಾರ, ಉತ್ತರದೇವಿ, ಸಿರಿಕವಲಿ, ನೀಲಗಂಗಾನ ಹಾಡು ಮೊದಲಾದ ಮಾಹಿತಿಗಳು ಲಭ್ಯವಾಗುತ್ತವೆ.

ಇಲ್ಲಿ ದು:ಖಾಂತ ಕಥನಗೀತೆಗಳಿಗೆ ಪ್ರಾಮುಖ್ಯತೆ ಕೊಡಲಾಗಿದೆ. ತಾವು ಕೇಳುತ್ತ ಬಂದ ಪುರಾಣ, ಪವಾಡ ತಮಗೆ ತಿಳಿದ ಚರಿತ್ರೆ, ಧಾರ್ಮಿಕ ಸಾಮಾಜಿಕ ತ್ಯಾಗ ಬಲಿದಾನ, ಸುಖದು:ಖದ ಸಂದರ್ಭಗಳಲ್ಲಿ ತಮಗೆ ತಿಳಿದ ಧಾಟಿಯಲ್ಲಿ ಮನಮೋಹಕವಾಗಿ ಹಾಡುತ್ತಾರೆ. ಇವುಗಳನ್ನು ಜನಪದ ಕಥನ

ಕಾವ್ಯಗಳು ಎಂದು ಹೇಳುತ್ತ ಬಂದಿದ್ದೇವೆ. ಆದರೆ ಜನಪದ ಕಥನ ಕಾವ್ಯಗಳು ಸಾಮಾಜಿಕ ಸೃಷ್ಟಿ. ಫಿಲಿಪ್ಸ ಬ್ಯಾರಿ ಎನ್ನುವ ವ್ಯಕ್ತಿ ಈ ಎಲ್ಲ ಗೀತೆಗಳನ್ನು ಆಳವಾಗಿ ಅಧ್ಯಯನ ಮಾಡಿ, ಒಟ್ಟು ಜನಪದ ಕಥನ ಕಾವ್ಯಗಳು ಎಂದು ಕರೆದಿದ್ದಾನೆ. ಆ ದೃಷ್ಟಿಯಿಂದ ಸಾಮೂಹಿಕ ಸೃಷ್ಟಿ, ಸಾಮೂಹಿಕ ಪುನರ್ ವೃಷ್ಟಿ ಎಂದು ಹೇಳಲಾಗುತ್ತದೆ. ಹಾಗೆನ್ನುವುದರಿಂದ ಜನಪದ ಕವಿ ಅಜ್ಞಾತನಾಗಿ ಬಿಡುತ್ತಾನೆ. ಒಂದಲ್ಲ ಒಂದು ರೀತಿಯಿಂದ ಕವಿಯಾದ ಈ ವ್ಯಕ್ತಿ, ಸಾಮಾಜಿಕ ಜೀವನದ ಈ ಬದುಕಿಗೆ ಬದ್ಧನಾಗಿರುತ್ತಾನೆ. ವಿಲಿಯಂ ಎ ಲೇಸ್ಸಾ ಎನ್ನುವ ವಿದ್ವಾಂಸ Tales from with a toll ಎನ್ನುವ ಕೃತಿಯಲ್ಲಿ ಈ ಮಾತನ್ನು ಸ್ಪಷ್ಟಪಡಿಸಿದ್ದಾನೆ. ಜೊತೆಗೆ ಆತ ಹೇಳುವ ಇನ್ನೊಂದು ಮಾತು ಮಹತ್ವದ್ದೆನಿಸುತ್ತದೆ ಎಂದು ಡಾ. ಹಕಾರಿ ಅವರು ಉಲ್ಲೇಖಿಸಿದ್ದಾರೆ.

ಕಥನ ಗೀತೆಗಳಲ್ಲಿ ಕಾಣುವ ಮತ್ತೊಂದು ಮಹತ್ವದ ಗುಣ, ಒಟ್ಟು ಕಾವ್ಯದಲ್ಲಿ ಮೂರ್ತಗೊಳ್ಳುವ ಸೌಂದರ್ಯಾನುಭೂತಿ. ಸಹಜ ಶೈಲಿ, ಮನಸ್ಸನ್ನು ಕಲಕುವ ಘಟನೆಗಳ ಅನಿರೀಕ್ಷಿತ ತಿರುವು, ಪಾತ್ರಗಳ ಮಾನಸಿಕ ಪಾತಳಿಯಲ್ಲಿ ತರಂಗಿತಗೊಳ್ಳುವ ಧ್ವನಿಪೂರ್ಣತೆ ಮುಂತಾದ ಅಂಶಗಳು ಸಂಯೋಜಿತಗೊಂಡು ಅವು ಉಜ್ವಲ ಕಾವ್ಯದ ಮಾದರಿಗಳಾಗುತ್ತವೆ. ಒಮ್ಮೊಮ್ಮೆ ಅತಿರಂಜಕತೆ ಭಾವಾತಿರೇಕಗಳು ತೋರುವುದೂ ಉಂಟು. ಆಗ ಅಂಥ ಕೆಲವು ರಚನೆಗಳು ಕವಿಯ ಮನೋಭಾವದ ಪ್ರತಿಬಿಂಬಗಳಾಗುತ್ತವೆ. ಇನ್ನು ಕೆಲವೆಡೆ ಕೇವಲ ಘಟನೆಗೆ ಮಾತ್ರ ಪ್ರಾಮುಖ್ಯತೆ ಕೊಟ್ಟ ಕವಿ ಆ ಪ್ರಸಂಗದ ವಿವರಗಳನ್ನು ಅನುಕ್ರಮವಾಗಿ ಪಟ್ಟಿಮಾಡುವ ವರದಿಗಾರನೂ ಆಗುತ್ತಾನೆ. ಜನಪದ ಸಮುದಾಯಗಳ ಸಹಜ ಸ್ಪಂದನೆಯ ವೈಶಿಷ್ಟ್ಯದಿಂದಾಗಿ ಕೆಲವು ಕಥನಗೀತೆಗಳಂತೂ ಬದುಕಿನ ಸಮಸ್ಯೆಗಳ ಗಂಭೀರ ಗವಾಕ್ಷಗಳನ್ನು ತೆರೆದು ಅಂತ:ಕರಣವನ್ನು ಕರಗಿಸಿಬಿಡುತ್ತವೆ. ಕೆಲವು ಕಥನ ಗೀತೆಗಳನ್ನು ಕೇಳುತ್ತಿದ್ದಂತೆ, ಓದುತ್ತಿದ್ದಂತೆ ಮನಸ್ಸು ಉದ್ವಿಗ್ನಗೊಳ್ಳುತ್ತದೆ, ಭಾವಪರವಶತೆಯಿಂದಾಗಿ ಹೃದಯ ಉಮ್ಮಳಿಸುವುದೂ ಉಂಟು.

ಈ ಅಧ್ಯಯನದಲ್ಲಿ ಬರುವ ಕಥನಗೀತೆಗಳ ಆಯ್ಕೆ ವಿವೇಚನೆಯಲ್ಲಿ ಈರೋಬಿ, ಕೆರೆಗೆಹಾರ, ಉತ್ತರದೇವಿ, ಸಿರಿಕವಲಿ, ಹಲಗಲಿ ಬೇಡರು, ಗ್ವಾಲಣ್ಣನ ವೀರಗಾಥಾ, ಬರದ ಹಾಡು, ಚಿಕ್ಕಿ ಉಂಗರಕೆ ನಾರಿ ಮನಸೋತಳೊ, ನೀಲಗಂಗಾನ ಹಾಡು, ನಿನ ಮುಖವ ಸಿಗಲಿಲ್ಲ, ಸಂಗವ್ವ ಮಾಡ್ಯಾಳ ಕಲಹ, ಮಹಾಸತಿ, ಆತ್ಮಬಲಿ, ಅತ್ತೆಸೊಸೆ, ಆಕಸ್ಮಿಕ ಸಮುದಾಯ, ಬಂಡಾಯ, ಗೋಗ್ರಹಣ, ಕೌಟುಂಬಿಕ ಮಾತ್ಸರ್ಯ, ನಿಸರ್ಗದ ಮುನಿಸು, ಕಾಮ, ವಿಕೃತಿ, ಪಾತಿವ್ರತ್ಯ, ಪುನಃನಿಷ್ಠೆ (ಅಪವಾದ) ಶೀಲ, ಸಂದೇಹ ಮುಂತಾದ ಹನ್ನೊಂದು ಆಶಯಗಳನ್ನು ಆಯ್ದುಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರಲ್ಲಿ ಖಂಡಕಾವ್ಯ, ಕಥನಗೀತೆ, ಲಘು ಕಥನಗೀತೆ, ದೀರ್ಘ ಕಥನಗೀತೆ, ಮುಂತಾದ ಎಲ್ಲ ಬಗೆಯ ಕಥನಗೀತೆಗಳನ್ನು ಅಳವಡಿಸಲಾಗಿದೆ. ಇದರಲ್ಲಿ ಪ್ರತಿ ಹಾಡಿನ ತಲೆಬರಹವೇ ಹೇಳುವಂತೆ ಕಥನಗೀತೆಗಳ ವಿಷಯವನ್ನೆ ಚರ್ಚಿಸಲಾಗಿದೆ. ಇವುಗಳಲ್ಲಿ ಈರೋಬಿ, ಕೆರೆಗೆಹಾರ, ಉತ್ತರದೇವಿ, ಸಿರಿಕವಲಿ, ಹಲಗಲಿ ಬೇಡರು ಇವುಗಳನ್ನು ವಿಶೇಷವಾಗಿ ಗಮನಿಸಲಾಗಿದೆ. ಈರೋಬಿ, ಹೂನಾಸತಿಯಂತೆ ಮಹಾಸತಿ ಆದವಳು. ಅದರಲ್ಲಿ ವಿಷಯ ಸಮೀಕ್ಷೆ ಒಳಗೊಂಡಂತೆ ಎಲ್ಲ ರೀತಿಯ ಮಹಾಸತಿ ಸ್ವರೂಪವನ್ನು ವಿವರಿಸಲಾಗಿದೆ. ಆದರೆ ಕೊಟ್ಟ ಹೆಣ್ಣು ಕುಲಕ್ಕೆ ಹೊರಗು. ಆದ್ದರಿಂದ ಗಂಡನ ಮನೆಯನ್ನೇ ಆಶ್ರಯಿಸಬೇಕು, ಬಿಟ್ಟುಹೋಗುವಂತಿಲ್ಲ. ಸೊಸೆಯ ಈ ನಿಲವಿನಿಂದ ಸಿಡಿದ ಅತ್ತೆ ಅವಳನ್ನು ಮನೆಯಿಂದ ಹೊರದೂಡುವುದು. ಆಗ ಸೊಸೆಯ ಬವಣೆಗೆ ಮಿತಿಯಿಲ್ಲ. ಮಕ್ಕಳನ್ನು ಕಟ್ಟಿಕೊಂಡು ಬಾಳು ಕೆಟ್ಟವಳು ಎನ್ನುವ ಅಪವಾದ ಹೊತ್ತ ತಮ್ಮ ಮಗಳಿಗೆ ತವರುಮನೆಯವರು ಆಶ್ರಯಕೊಡಬಹುದು. ತಮ್ಮ ಮಗಳ ಮೇಲಿನ ಅಪವಾದದ ಸತ್ಯಾಸತ್ಯತೆಯನ್ನು ಬಯಲುಗೊಳಿಸಿ ಮತ್ತೆ ಮಗಳ ಬದುಕು ಹಾದಿಗೆ ಹತ್ತುವಂತೆ ಮಾಡಬಹುದು. ಒಂದು ವೇಳೆ ತವರುಮನೆಯವರು ಈ ಯಾವುದಕ್ಕೂ ಸಿದ್ಧವಾಗದೆ ಅವಳಿಗೆ ಆಶ್ರಯವನ್ನೇ ತಿರಸ್ಕರಿಸಿದರೆ? ಇಂಥ ಪರಿಸ್ಥಿತಿಯ ಕ್ರೂರ ಮುಷ್ಟಿಗೆ ಸಿಕ್ಕ ಸೊಸೆಯೊಬ್ಬಳ ದುರಂತದ ಜೀವನವೇ ಉತ್ತರದೇವಿ ಕಥನಗೀತೆ.

ಉತ್ತರಿ ನೀರಿಗೆ ಹೋದವಳು ಬರುವುದಕ್ಕೆ ತಡವಾಯಿತು. ಅವಳು ಹೋದಾಗಲೇ ಮಳೆ ಹುಯ್ದು ಕಾಲುಜಾರಿ ಬಿದ್ದಳು; ಹರವಿ ಒಡೆಯಿತು. ಮನೆಗೆ ಬಂದಾಗ ಅತ್ತೆ ಯಾಕೆ ತಡ? ಹರವಿ ಯಾಕೆ ಒಡೆದದ್ದು ? ಸೀರೆ ಸೆರಗೇಕೆ ಹರದಿದೆ ? ನಿರಿಗೇಕೆ ಮಾಸಿದೆ ? ಹೀಗೆ ಮೊದಲೇ ಮಳೆಯಲ್ಲಿ ಸ್ವಲ್ಪ ಸ್ವಲ್ಪ ತೋಯಿಸಿಕೊಂಡು ಬಂದ ಸೊಸೆಯ ಮೇಲೆ ಮತ್ತೆ ಪ್ರಶ್ನೆಯ ಮಳೆ. ಬರುವಾಗ ಮಾವಿನ ತೋಟದಲ್ಲಿ ಮಳೆ ಬಂದಾಗ ನಿಂತಿರಬಹುದು. ಬಾಳೆ ಕಂದು ರಸ ಹತ್ತಿತ್ತು, ಬದನೇ ಮುಳ್ಳು ಚುಚ್ಚಿತು ಎನ್ನುತ್ತಾಳೆ. ಬಾಳೆಗೆಲ್ಲಿ ಕೊಳೆ? ಬದನೆಗೆಲ್ಲಿ ಮುಳ್ಳು? ನಿನ್ನ ಮಾತು ಸುಳ್ಳು. ಸೊಸಿ ಬಾಲೆ ನಿನಮಾತು ನಿಜವೇನೇ? ನೀನು ನಿಜವನ್ನು ಮುಚ್ಚುತ್ತೀ. ಅತ್ತೆಯ ಆರೋಪ. ಸೊಸೆ ಏನು ಹೇಳಿದರೂ ಕೇಳುವುದಿಲ್ಲ. ಅತ್ತೆಯ ಆರೋಪದಲ್ಲಿ ಸತ್ಯವುಂಟೇ? ಎತ್ತಿಗೆ ಮಾತುಂಟೇ? ಕತ್ತೆಗೆ ಕೋಡುಂಟೆ? ಅತ್ತೆ ನನ್ನ ಮಾತು ಸತ್ಯ. ಋಷಿಯಾಡಿದ ಮಾತಿಗೆ ಹುಸಿಯುಂಟೆ ? ಹೀಗೆ ಮಾತಿಗೆ ಮಾತು ಬೆಳೆದು ಅತ್ತೆ ಸೊಸೆಯ ನಡುವೆ ಕಾಳಗವೇ ಹತ್ತಾವೆ.. ಮಕ್ಕಳನ್ನು ಕರೆದುಕೊಂಡು ಹೊಳೆ ದಡದಲ್ಲಿಳಿಸಿ, ಗಂಗೆಗೆ ನಮಸ್ಕರಿಸಿ, ಮಕ್ಕಳ ಕಣ್ಣಿಗೆ ಬಟ್ಟೆಕಟ್ಟುವುದು ಕಥನ ಕ್ರಿಯೆಗಳ ಕಲಶವಾಗಿರುವಂತೆ ಉತ್ತರದೇವಿಯ ಸಂಕಟ ಶಿಖರವೂ ಆಗಿದೆ. ತಾಯಿಯೇ ತನ್ನ ಮಕ್ಕಳ ಕಣ್ಣುಕಟ್ಟುವುದು, ಮಕ್ಕಳು ತಾಯಿಯನ್ನು, ಮುದ್ದುಕೊಟ್ಟು ನಮ್ಮ ಕೊಲ್ಲಬಾರದು ಎನ್ನುವುದು, ಅವರು ನಿಂತಿರುವ ನದಿಯ ಎರಡೂ ದಡಗಳನ್ನು ಮೀರಿ ಹರಿಯುವ ಅಳಲನ್ನು ಗೋಚರಿಸುತ್ತದೆ.

ಕವಿ ಇಲ್ಲಿ ಉತ್ತರದೇವಿಯ ಸಂಕಟದ ಜೊತೆಜೊತೆಗೆ ಸ್ಪಂದಿಸಿದ್ದಾನೆ. ನೀವೆಲ್ಲಿ ಹೋಗತಿರೊ ಕಂದಾ ಎಂದು ಅವಳು ಮಕ್ಕಳನ್ನು ತಬ್ಬಿಕೊಳ್ಳುವ ಕ್ರಿಯೆಯಲ್ಲಿ ದು:ಖಾಂತದ ತೆರೆ, ತೆರೆಗಳು, ಹಂಪಿ ಹೊಳೆಯನ್ನು ಅಪ್ಪಳಿಸುತ್ತವೆ. ಅವಳನ್ನು ಈ ಸ್ಥಿತಿಗೆ ತಳ್ಳಿದ ಕುಟುಂಬ ವ್ಯವಸ್ಥೆಯ ಬಗ್ಗೆ ರೋಷ ವಿಜೃಂಭಿಸುತ್ತದೆ. ಉತ್ತರದೇವಿಯ ಅತ್ತೆಮನೆ ಸಂಕಟ ಮತ್ತು ಗಂಗೆಯಲ್ಲಿ ಮುಳುಗುವ ಈ ದು:ಖಾಂತದ ವಾಸ್ತವ ಕ್ರಿಯೆಗಳಲ್ಲಿ ಒಂದು ಅಂತರ್ಗತವಾದ

ಸಾಹಚರ್ಯಕ್ರಿಯೆ ಏರ್ಪಟ್ಟು ಉತ್ತರದೇವಿ ಒಂದು ಸಾಂಕೇತಿಕ ಕಾವ್ಯವಾಗುತ್ತದೆ. ಇಂಥ ಒಂದು ಕಾರಣಕ್ಕಾಗಿಯೋ ಏನೋ ಜನಪದರು ಉತ್ತರದೇವಿಯ ಹೆಸರನ್ನು ಮಳೆಯ ಜೊತೆ ಸೇರಿಸಿದ್ದಾರೆ. ಆಕೆಯನ್ನು ಒಬ್ಬ ಪೂಜ್ಯ ಅಥವಾ ಪುರಾಣವ್ಯಕ್ತಿಯನ್ನಾಗಿ ಮಾರ್ಪಡಿಸಿದ್ದಾರೆ. ಅದರಂತೆ ಆತ್ಮಬಲಿ ಕೂಡ ಎಲ್ಲ ವಿವರಗಳನ್ನು ಒಳಗೊಂಡಿದೆ.

ಕಾಮವಿಕೃತಿ ಹೆಸರಿನಲ್ಲಿ ಬರುವ ಚಿಕ್ಕ ಉಂಗುರಕ್ಕೆ ನಾರಿ ಮನಸೋತಳು ಎನ್ನುವಲ್ಲಿ ಮಾನವ ದೌರ್ಬಲ್ಯವನ್ನು ಚಿತ್ರಿಸಲಾಗಿದೆ. ಅಂದರೆ ಒಂದು ಕ್ಷಣದ ಗಂಡಿನ ನೋಟಕ್ಕೆ ಮಾರುಹೋದ ಹೆಣ್ಣುಮಗಳು, ತನ್ನ ಜೀವನದ ಇತಿಮಿತಿಯನ್ನು ಅರಿಯದಂತೆ ಆಗುವುದು, ಇಡೀ ಮಾನವ ಕುಲವನ್ನು ವಿಶೇಷವಾಗಿ ಹೆಣ್ಣುಮಗಳನ್ನು ದುರ್ಬಲಗೊಳಿಸುವ ಅಥವಾ ತಲೆತಗ್ಗಿಸುವಂತೆ ಮಾಡುವ ಸಂಗತಿಯಾಗಿದೆ. ಆದರೆ ಇಡೀ ಕರ್ನಾಟಕದ ಮಟ್ಟಿಗೆ ಹನ್ನೊಂದು ಆಶಯಗಳೆಂದರೆ ಯಾರಿಗಾದರೂ ಆಶ್ಚರ್ಯ ಬರಬಹುದು. ಆದ್ದರಿಂದ ಮೂಲ ಧಾಟಿಯನ್ನು ಮರೆತುಹೋದ ಅನೇಕ ಕಥನಗೀತೆಗಳನ್ನು ಕಂಡು ಹಿಡಿಯುವುದು ಇವೆಲ್ಲ ವಿಭಿನ್ನ ಪ್ರಾದೇಶಿಕ ಮಟ್ಟದಲ್ಲಿ ನಡೆಯಬೇಕಾಗಿರುವ ಕಾರ್ಯವಾಗಿದೆ.

ಒಟ್ಟು ಕನ್ನಡ ಖಂಡಕಾವ್ಯಗಳ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಳ್ಳಬೇಕು. ಪ್ರತಿಯೊಂದು ಕಥನಗೀತೆಗಳಲ್ಲಿ ಲಭ್ಯವಿರುವ ಸನ್ನಿವೇಶಗಳನ್ನು ಕುರುಹಿಟ್ಟು ಹಿಡಿದು ಸಂಶೋಧನೆ ಮಾಡಬೇಕು. ಇಷ್ಟಾದ ಬಳಿಕ ಜನಪದ ಮಾಹಾಕಾವ್ಯಗಳ ಬುಡಕಟ್ಟು ಹಿನ್ನೆಲೆಯಲ್ಲಿ ಪ್ರದೇಶಗಳನ್ನು ಗುರುತಿಸಿ ಬರುವ ಮಲೆಮಾದೇಶ್ವರ, ಸೇವಾಲಾಲ, ಎತ್ತಪ್ಪ , ಜುಂಜಪ್ಪ, ಮಾಳಿಂಗರಾಯ, ಬೀರದೇವರು ಮುಂತಾದವರ ಕಥನಗೀತೆಗಳ ಒಡಲಲ್ಲಿ ಹುದುಗಿರುವ ಎಲ್ಲ ಸಂಘರ್ಷಗಳನ್ನು ಅನ್ವೇಷಿಸಬೇಕು. ಆಗ ನಿಜವಾದ ಜನಪದ ಕಾವ್ಯ, ಅದರ ಸ್ವರೂಪ, ರೀತಿ, ನೀತಿ ಆಚರಣೆಗಳು, ಸಾಮಾಜಿಕ ನ್ಯಾಯ, ಅದಕ್ಕಾಗಿ ದೇವರನ್ನು ಮೊರೆಹೋಗುವ ಮುಗ್ಧಜನಪದರು, ಕ್ಷುಲ್ಲಕ ಕಾರಣಕ್ಕಾಗಿ ಕೊಲೆ ಸುಲಿಗೆ ಮಾಡುವುದು, ಪರರ ಮೇಲೆ ಅನ್ಯಾಯ ಅತ್ಯಾಚಾರ ಎಸಗುವುದು, ಇವೆಲ್ಲವೂ

ಬಯಲಾಗುತ್ತವೆ. ಇಡೀ ಕರ್ನಾಟಕದ ತುಂಬ ಬಡತನದ ಬೇಗೆಯಲ್ಲಿ ಸಿಕ್ಕು ಉರಿಯುತ್ತಿರುವ ಜನರಲ್ಲಿ ಹುದುಗಿರಬಹುದಾದ ಸವದತ್ತಿ, ಮೈಲಾರ, ಚಂದ್ರಗುತ್ತಿ, ಗುತ್ತರಗಿ, ರಾಜನಾಳ ತಾಂಡಾ ಮೊದಲಾದ ಪ್ರಮುಖ ಯಾತ್ರಾ ಸ್ಥಳಗಳಿಗೆ ಭೆಟ್ಟಿಕೊಟ್ಟು ಸ್ವತ: ಹಾಡನ್ನು ಕೇಳಿ ಧ್ವನಿ ಮುದ್ರಣ ಮಾಡುವುದು ಅಗತ್ಯವಾಗಿದೆ.

ಈ ಮಹಾಪ್ರಬಂಧದಲ್ಲಿ ಬರುವ ದು:ಖಾಂತ ಕಥನಗೀತೆಗಳ ಕೆಲವು ಸಾಮಾಜಿಕ ಅಂಶಗಳನ್ನು ಗಮನಿಸಿದಾಗ ನಮ್ಮ ಬದುಕಿನ ಸಾಧಿತ ಸಂಸ್ಕೃತಿಗೆ ಪ್ರಾಚೀನ ನಡವಳಿಕೆಯ ನಂಬುಗೆಗಳ ಎರಕಗಳೇ ಕಾರಣ. ಅವು ಹಲವು ಹತ್ತು ವಿಧದಲ್ಲಿ ಬದುಕನ್ನು ಕಾಡಿವೆ; ಬದುಕಿಗೆ ರೂಪಕೊಟ್ಟಿವೆ; ಅರ್ಥ ಕಲ್ಪಿಸಿವೆ. ಕೆಲವು ವಾಸ್ತವಿಕ ಜೀವನದ ಸ್ಪಂದನೆಗಳನ್ನು ಗುರುತಿಸುವಾಗ ದು:ಖಾಂತ ಕಥನಗೀತೆಗಳು ಸಾಮಾಜಿಕ ಸ್ಥೂಲ ರೂಪದ ಆಕರಗಳಾಗುತ್ತವೆ. ಅಂದಂದಿನ ಘಟನೆಗಳನ್ನು ಕುರಿತು ವಿವರಣೆ ಚಿತ್ರಣದ ಸುತ್ತಲೂ ನಿರ್ಮಿಸಿರಬಹುದಾದ ಅಸಹಜ, ಅತಿಧ್ವನಿಯ ಆವರಣಗಳನ್ನು ಸರಿಸಿ, ಶುದ್ಧ ಜನಪದಜೀವನಕ್ಕೆ ಸಂಬಂಧಿಸಿದ ವಿವಿಧಾಂಶಗಳ ಅನಾವರಣವೂ ದು:ಖಾಂತ ಕಥನ ಗೀತೆಗಳ ವಿವೇಚನೆಯಲ್ಲಿ ಮಹತ್ವ ಪಡೆದುಕೊಂಡಿದೆ.

ಲಾವಣಿ, ಕಥನಲಾವಣಿ, ಕಥನಗೀತೆ ಮೊದಲಾದ ವಿಷಯು ಝಳಪಿಸಿದಾಗ, ಕುದರೆ ಏರಿದಾಗ, ರಣಕಹಳೆ ಮೊಳಗಿದಾಗ, ಮದುವೆ ಆಗದೆ ಮುಗ್ಧೆ ಬಾಲವಿಧವೆ ಕೊಂಡವೇರುವಾಗ, ರುದ್ರಕಾಳಿಯಾಗಿ ಗರ್ಜಿಸಿದಾಗ, ದೇಶ ವಿದೇಶಗಳಿಂದ ಭಾರತದ ಕಡೆ ಲಕ್ಷ್ಯ ತಿರುಗಿಸುವ ಒಂದು ಸನ್ನಿವೇಶ ಸೃಷ್ಟಿಯಾದೀತು. ಮುಂತಾದ ವಿವರಗಳನ್ನು ಈ ಮಹಾಪ್ರಬಂಧದಲ್ಲಿ ಡಾ. ಹಕಾರಿಯವರು ಬಹಳ ಮಾರ್ಮಿಕವಾಗಿ ಚರ್ಚಿಸಿದ್ದಾರೆ.

ಜಾನಪದ ಭಂಡಾರ : ಈ ಕೃತಿಯಲ್ಲಿ ಜನಪದ ಪ್ರದರ್ಶನಾತ್ಮಕ ಕಲೆಗಳು, ಉತ್ತರ ಕರ್ನಾಟಕದ ಕಥನ ಗೀತೆಗಳು, ಮೂಡಲಪಾಯದ ಮಾತುಗಾರಿಕೆ, ಆಚರಣೆಯ ಕುಣಿತಗಳು, ದೊಡ್ಡಾಟ, ಎಲ್ಲಮ್ಮನನ್ನು ಕುರಿತು ಪೌರಾಣಿಕ

ಸಂಗತಿ ಮುಂತಾದ ಲೇಖನಗಳು ಇದರಲ್ಲಿವೆ.

ಈ ಕೃತಿಯಲ್ಲಿ ಬರುವ ಬಹಳ ಮಹತ್ವದ ಲೇಖನಗಳೆಂದರೆ ದೊಡ್ಡಾಟ ಮತ್ತು ಎಲ್ಲಮ್ಮನನ್ನು ಕುರಿತ ಪುರಾಣಿಕ ಸಂಗತಿ. ಆದರೆ ಉಳಿದ ಲೇಖನಗಳು ಕಡೆಗಣಿಸುವಂಥವಲ್ಲ. ಕಾರಣ ಡೊಡ್ಡಾಟ ಕುರಿತ ಲೇಖನದಲ್ಲಿ ಕುಣಿತಗಳು ಕ್ರಿಯಾಮೂಲವಾಗಿರುವುದನ್ನು ಎತ್ತಿ ಹೇಳಲಾಗಿದೆ. ಡಾ. ಹಕಾರಿಯವರು ದೊಡ್ಡಾಟದ ಮೂಲಭೂತ ಸಂಗತಿಗಳ ಬಗ್ಗೆ ಒಂದು ಮಾದರಿ ಕೊಟ್ಟು ವಿವರಿಸಿದ್ದಾರೆ. ಅದರಂತೆ ದೊಡ್ಡಾಟದ ರಾಚನಿಕ ಅಂಗಗಳ ಬಗ್ಗೆ ಹೇಳುತ್ತ, ಜನಪದ ವೃಂದಗಳು ಅಲೆಮಾರಿತನದ ಹಂತ ಧಾಟಿ ನೆಲೆ, ವಸತಿ, ಕೃಷಿ ಕಸಬುಗಳನ್ನು ರೂಪಿಸಿಕೊಂಡು ಕುಟುಂಬ ಸಮಾಜದ ಕಟ್ಟುಪಾಡಿಗೆ ಒಳಗಾಗಿ ಧರ್ಮಪರಿಕಲ್ಪನೆ ಕುಲಸಂಕೇತಾರಾಧನೆ ಮೂಡುವವರೆಗೆ, ನಮ್ಮ ಜನಪದರಲ್ಲಿ ಕಲೆಯ ಅಭಿವ್ಯಕ್ತಿಯೇ ಇರಲಿಲ್ಲ ಎನ್ನುವುದು ಪರಿಹಾಸ್ಯದ ಮಾತಾಗುತ್ತದೆ. ಆದುದರಿಂದ ಈ ಅವಧಿಯ ಸಹಸ್ರಾರು ವರ್ಷಗಳ ಜನಪದ ಕಲಾಪರಂಪರೆಯಲ್ಲಿ ಮೂಡಿ ಬಂದ ಅಗಣಿತರಂಗ ಪ್ರಕಾರಗಳ, ಸ್ಥೂಲರೂಪಗಳು ಇದ್ದಿರಲೇಬೇಕು ಎಂದು ಅಭಿಪ್ರಾಯಪಡುತ್ತಾರೆ. ದೊಡ್ಡಾಟದ ವಿವಿಧ ಅಂಗಗಳಾದ ವೇಷಗಾರಿಕೆ, ಬಣ್ಣ, ಸಂಭಾಷಣೆ, ವಾದ್ಯ, ಮೇಳ, ಕಥೆಗಾರ, ಸಾರಥಿ, ಹಾಡುಗಾರಿಕೆ, ಹಿಮ್ಮೇಳ ಮುಮ್ಮೇಳ, ಕುಣಿತ ಮುಂತಾದವುಗಳ ಬಗ್ಗೆಯೂ ವಿವರವಾಗಿ ಚರ್ಚಿಸಿದ್ದಾರೆ. ಇನ್ನೊಂದು ಮಹತ್ವದ ಸಂಗತಿ ಎಂದರೆ ಸಾರಥಿಯ ಮಾತುಗಳಲ್ಲಿ ಬರುವ ದೃಢವಾದ ಭೇರಿ, ತಮ್ಮಟೆ, ಹೆಗ್ಗಾಳೆ, ಚಿನ್ನಕಾಳೆ, ನಗಾರಿ, ನೌಬತ್ತು ಇತ್ಯಾದಿ ವಿಷೇಷವಾಗಿರುವುದನ್ನೂ ದೊಡ್ಡಾಟದ ಮಾತುಗಳಲ್ಲಿ ಸ್ಥಳನಾಮಗಳು ಒಂದು ಕೋಶದಂತೆ ಇರುವುದನ್ನೂ ಕಾಣಬಹುದು.

ಎಲ್ಲಮ್ಮನನ್ನು ಕುರಿತು ಹೇಳಿರುವ ಲೇಖನದಲ್ಲಿ– ರಟ್ಟವಂಶದ ದೊರೆ ಓರಂಗಲ್ಲಿನ ಮತ್ತು ಸೌದತ್ತಿಯಲ್ಲಿ ಆಳಿದ್ದು: ಈ ಎಲ್ಲ ಐತಿಹಾಸಿಕ ವಿಷಯಗಳ ಜೊತೆಗೆ ಜನಪದ ಸಾಮಗ್ರಿಗಳನ್ನು ಸೇರಿಸಿ ಕಾರ್ತವೀರ್ಯ

ಕುಂತಲದೇಶದ ಒಂದು ಭಾಗವಾಗಿದ್ದ ಕುಹುಂಡಿ ೩೦೦೦ ಪ್ರಾಂತವನ್ನು ಸೌದತ್ತಿಯ ರಟ್ಟರು ಸುಮಾರು ೩೦೦ ವರ್ಷ ಆಳಿದ್ದು ತಿಳಿದುಬರುತ್ತದೆ. ಇದರಲ್ಲಿ ಮೊದಲನೆಯ ಕಾರ್ತವೀರ್ಯ ಎರಡನೆಯ ಕಾರ್ತವೀರ್ಯ, ಮೂರನೆಯ ಕಾರ್ತವೀರ್ಯ, ನಾಲ್ಕನೆಯ ಕಾರ್ತವೀರ್ಯ. ಇದ್ದಾರೆ. ಈ ನಾಲ್ವರಲ್ಲಿ ಎಲ್ಲಮ್ಮನ ಕಥಾನಕಗಳ ಸ್ಥಳ ಪುರಾಣಗಳಲ್ಲಿ ತೊಡಗಿಕೊಂಡವನು. ಕ್ರಿ.ಶ. ೯೬೦ ರಲ್ಲಿ ಆಳಿದ ಮೊದಲನೆಯ ಕಾರ್ತವೀರ್ಯನೆಂದೇ ತಿಳಿದುಬರುತ್ತದೆ. ಈ ಎಲ್ಲ ಸಾಮಗ್ರಿಗಳನ್ನು ಜೊತೆಗಿಟ್ಟುಕೊಂಡು ಮತ್ತೆ ಜನಪದ ಪುರಾಣ ಕಥೆ ಇತ್ಯಾದಿಗಳ ಜೊತೆಗೆ ಹೋಲಿಸಿ, ಆಮೇಲೆ ರಾಚನಿಕ ಪಂಥದ ಎಲ್ಲ ಸೂತ್ರಗಳನ್ನು ಅಳವಡಿಸಿದಾಗ ನಮಗೆ ಕಂಡುಬರುವ ಎಲ್ಲಮ್ಮನ ಕಥೆ ಇಷ್ಟು. ಇದರಲ್ಲಿ ವೈರುಧ್ಯ ಸ್ಥಿರೀಕರಣ, ಸ್ವೀಕರಣ ಎಲ್ಲವೂ ಒಳಗೊಂಡಿವೆ. ಕಾವ್ಯಕುಬ್ಜದ ಅರಸನ ಮಗಳಾದ ಎಲ್ಲಮ್ಮ ನೋಡಲು ತುಂಬಾ ಚೆಲುವೆ. ಹೀಗಾಗಿ ಕಾಶ್ಮೀರದ ರೇಣುಕರಾಜನ ಮಗಳು ಜಗದಂಬಾ, ಮಾಯಾಕಾರ್ತಿ; ಇಡೀ ಲೋಕವನ್ನೇ ಕಣ್ಣು ಕುಕ್ಕಿಸಿದವಳು. ಜಮದಗ್ನಿಯನ್ನು ನೋಡಿ ಅವನ ರೂಪಕ್ಕೆ ಮೆಚ್ಚಿದ ರೇಣುಕೆ, ಅವನನ್ನೇ ಮದುವೆ ಆಗುವುದಾಗಿ ಹಟ ತೊಡುತ್ತಾಳೆ. ಸಮುದ್ರ ಸ್ನಾನ, ಹಿರಣ್ಣಿಕೆಯ ಮೈಗಂಧ ತೇಲಿ ಬರುವುದು, ರೇಣುಕೆ ಗರ್ಭವತಿ ಆಗುವುದು, ವ್ರತಭಂಗದ ಆರೋಪ, ರೇಣುಕೆಯನ್ನು ಜಮದಗ್ನಿ ಹೊರದೂಡಲು ಇದು ಒಂದು ಕಾರಣ ಆಗುತ್ತದೆ. ಪತಿಯಿಂದ ತಿರಸ್ಕೃತಳಾದ ರೇಣುಕೆಗೆ ಜೋಗುಳ ಸತ್ಯವ್ವನ ಆಸರೆ, ಪರಶುರಾಮನ ಜನನ, ತಂದೆ ಹೆಸರು ತಿಳಿಯದ ಪರಶುರಾಮ, ತಾಯಿ ನಡತೆಯನ್ನು ಶಂಕಿಸುವುದು, ರೇಣುಕೆ ಹಾದಿಯ ಮಾತಂಗಿ, ಜೋಗುಳ ಬಾವಿ ಸತ್ಯವ್ವನನ್ನು ವಿಚಾರಿಸಲು ಹೇಳುವುದು. ರೇಣುಕೆ ತಾಯಿಯನ್ನು ಪೀಡಿಸಿದ ರಾಮನಿಗೆ ಕಣ್ಣು ಹೋಗುವುದು, ರೇಣುಕೆ ಮಗನ ಕಣ್ಣಿಗೆ ಶಿವನ ಹತ್ತಿರ ಹೋಗಿ ಕೃಪೆಯಾಚಿಸುವುದು, ರಾಮನಿಗೆ ಕಣ್ಣುಬರುವುದು, ಪಶ್ಚಾತ್ತಾಪದಿಂದ ಬೆಂದ ಪರಶುರಾಮ, ಹೆಚ್ಚಿನ ತಪಸ್ಸಿದ್ಧಿಗಾಗಿ ಒಂದು ಗುಪ್ತಸ್ಥಳಕ್ಕೆ ಹೋಗುವುದು. ತನ್ನ ವಿಷಯ ಇತರೆ ಯಾರಿಗೂ ಹೇಳದಂತೆ ಕಟ್ಟಪ್ಪಣೆ ಮಾಡುವುದು, ಜಮದಗ್ನಿಯ ಪ್ರತಿಮೆ ಮಾಡಿ ಪೂಜಿಸುವುದು, ಗಂಡ ಸತ್ತನೆಂದು ಹೇಳುವುದು,

ಎಲ್ಲಮ್ಮ ರಂಡಿ ಆಗುವುದು, ಜಮದಗ್ನಿ ತಾನೆ ಮತ್ತೆ ಮರಳಿ ಬರುವುದು, ಅಣ್ಣ ವೀರಣ್ಣ ಗೊಡಚಿಯಿಂದ ಕುಂಕುಮ ಬಳೆ ಕಳಿಸುವುದು, ಎಲ್ಲಮ್ಮ ಮುತ್ತೈದೆ ಆಗುವುದು. ಹೀಗೆ ಘಟನೆಗಳು ಜರುಗಿ ಪರಶುರಾಮನಿಂದ ತಾಯಿ ಎಲ್ಲಮ್ಮ ಕೊಲೆ ಆಗುವವರೆಗೆ ಮುಂದುವರಿಯುತ್ತದೆ. ಹೀಗೆ ಹತ್ತಾರು ವಿಷಯಗಳನ್ನು ಪರಿಶೀಲಿಸಿದ ಬಳಿಕ ನಮಗೆ ದೊರೆಯುವುದು, ಸೌದತ್ತಿಯ ಎಲ್ಲಮ್ಮನ ಹಿಂದೆ ಗಂಟುಬಿದ್ದ ವ್ಯಕ್ತಿಗಳಲ್ಲಿ, ಮಾಲಗಾರಶೆಟ್ಟಿ ಮತ್ತು ಬಂಕಾಪುರದ ಮಾದ್ಯಾ. ಈ ಇಬ್ಬರು ವ್ಯಕ್ತಿಗಳನ್ನು ಎಲ್ಲಮ್ಮ ಬಗ್ಗುಬಡಿಯುವುದು ವಿಚಿತ್ರವಾಗಿ ಕಾಣುತ್ತದೆ. ಇಷ್ಟಾದರೂ ಬಂಕಾಪುರ ಮಾದ್ಯಾ ಮತ್ತು ಮಾಲಗಾರ ರುದ್ರಶೆಟ್ಟಿ ಪ್ರತಾಪರುದ್ರನಾಗಿ ಸೇರ್ಪಡೆಗೊಳ್ಳುವುದನ್ನು ಹೆಚ್ಚು ಪರಿಶೀಲಿಸುವುದು ಅಗತ್ಯ ಎಂದು ಕಾಣುತ್ತದೆ.

ಜನಪದ ಕಥೆಗಳಲ್ಲಿ ಕಲ್ಯಾಣದ ಮಾದಾರ ಚೆನ್ನಯ್ಯನಲ್ಲಿಗೂ ಎಲ್ಲಮ್ಮ ಹೋಗುವ ವಿಷಯ ಬರುತ್ತದೆ. ಆದ್ದರಿಂದ ಎಲ್ಲಮ್ಮ ವಿಷಯವನ್ನು ಹಾಗೇ ಬಿಟ್ಟಿದ್ದೇವೆ. ಎಲ್ಲಮ್ಮನ ಗುಡಿಯ ಹತ್ತಿರ ಇರುವ ಬಲಗಡೆಗೆ ಮಾತಂಗಿ ಗುಡಿಯ ಹಾದಿಯಲ್ಲಿ ಭೈರವೇಶ್ವರ ಮಠವಿದ್ದು, ಅಲ್ಲಿ ಜೋಗಯ್ಯ, ಗೋರಕನಾಥ ವಿಗ್ರಹಗಳು ಇರುವುದನ್ನು ಗುರುತಿಸಲಾಗಿದೆ. ಕಾರಣ......

ಯಮ್ಮ ಯಲ್ಲಾರ ಬಾಯಲ್ಲು
'ಎಲ್ಲಿ' ಶಬುದವಮ್ಮಾ ರಾಮರಾಮ
'ಎಲ್ಲಮ್ಮ' ರಾಮರಾಮ ಎಂದೋ 'ಕರಿಯೆಲ್ಲ'

ಹೀಗೆ ಎಲ್ಲಮ್ಮನನ್ನು ಕುರಿತು ಎಲ್ಲ ಸಾಮಗ್ರಿಗಳನ್ನು ಇಲ್ಲಿ ಪರಿಶೀಲನೆಗೆ ಒಳಪಡಿಸುವುದು ಬಹಳ ಮಹತ್ವದ್ದಾಗಿದೆ. ಕಾರಣ ಅಕಸ್ಮಾತ್ ಬಂದ ಎಲ್ಲಮ್ಮನ ಗಂಡ ಅವಳನ್ನು ತಿರಸ್ಕರಿಸುವುದು ಮತ್ತು ಪರಶುರಾಮನಿಗೆ ಅವಳನ್ನು ಕೊಲ್ಲಲು ಹೇಳುವದು. ಈ ನಡುವೆ ಏಳುಕೊಳ್ಳದ ಎಲ್ಲಮ್ಮನ ಸಾಂಸ್ಥೀಕರಣದಲ್ಲಿ ಮುತ್ತು ಕಟ್ಟುವ ಪರಂಪರೆ ಬಂದು ಸೇರಿಕೊಂಡಿರುವುದು ಅನೇಕ ರೀತಿಯ ಉಹಾಪೋಹಗಳಿಗೆ ಕಾರಣವಾಗಿದೆ. ಆದ್ದರಿಂದ ಎಲ್ಲಮ್ಮ ಅಂದಿಗೂ ಸಮಸ್ಯೆ,

ಇಂದಿಗಂತೂ ಸಮಸ್ಯೆ ಆಗಿ ಉಳಿದಿದ್ದಾಳೆ. ಮುಂದೆ ಗಟ್ಟಿಯಾಗಿ ಆಧಾರ ದೊರೆಯುವವರೆಗೆ ಹೀಗೆಯೇ ಎಲ್ಲಮ್ಮನ ವಿಷಯ ಕಗ್ಗಂಟಾಗಿಯೇ ಉಳಿಯಬಹುದು. ಒಟ್ಟಾರೆಯಾಗಿ ಈ ಲೇಖನದಲ್ಲಿ ಡಾ. ಹಕಾರಿಯವರು ರೇಣುಕೆ ಮತ್ತು ಎಲ್ಲಮ್ಮನ ಬಗ್ಗೆ ಸಾಕಷ್ಟು ಆಧಾರ ಸಮೇತ ಮಾಹಿತಿ ನೀಡಿರುವುದನ್ನು ಕಾಣಬಹುದು.

ಹಂತಿ ಹಾಡುಗಳು:–ಈ ಕೃತಿಯು ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರದಿಂದ, ಮುತ್ತಿನ ಹಾರ ಮಾಲಿಕೆಯಲ್ಲಿ ೧೯೯೬ ರಲ್ಲಿ ಪ್ರಕಟವಾಗಿದೆ. ಉತ್ತರ ಕರ್ನಾಟಕದ ಜನಪದ ಸಾಹಿತ್ಯದಲ್ಲಿ ಹಂತಿಹಾಡುಗಳಿಗೆ ವಿಶೇಷ ಸ್ಥಾನವಿದೆ. ಜನಪದ ಸಮಾಜದ ಪ್ರತಿಶತ ೯೫ ರಷ್ಟು ವಿವಿಧ ಜನಸಮುದಾಯಗಳು, ಒಕ್ಕಲುತನ ಮತ್ತು ಅದನ್ನು ಸುತ್ತುವರಿದು ಹೊಂದಿ ಅವಲಂಬಿಸಿ, ಬೆಳೆದ ವಿವಿಧ ಕುಲಕಸಬುಗಳ ಅಸಂಖ್ಯ ಆಯಗಾರರು, ಕುಂಬಾರ, ಮೇದಾರ ಮೊದಲುಗೊಂಡು ಬ್ಯಾಗಾರರವರೆಗೆ, ನಮ್ಮ ಒಟ್ಟು ಬದುಕನ್ನು ನಿರ್ವಹಿಸಿ, ರೂಪಿಸುವಲ್ಲಿ ಬಹು ಮುಖ್ಯ ಪಾತ್ರವಹಿಸುತ್ತವೆ. ಒಕ್ಕಲುತನದ ವಿವಿಧ ಹಂತದ ಕೆಲಸ ಕಾರ್ಯಗಳಿಗೆ ಪ್ರಾಣಸ್ವರೂಪವಾಗಿರುವ ಈ ಆಯಗಾರರು, ಒಕ್ಕಲುತನಕ್ಕೆ ಅಗತ್ಯವಾದ ಸಾಧನ ಸಲಕರಣೆ ಮಾಡಿಕೊಟ್ಟು ರೈತನ ಹೊಲ ಬಿತ್ತುವುದರಿಂದ, ರಾಶಿಮಾಡಿ ಒಕ್ಕಿ ಮನೆ ಕಣಜಗಳಿಗೆ ತಂದು ಸಂಭ್ರಮ ಪಡುವವರೆಗೆ, ಇವರೆಲ್ಲರ ನೆರವು ಒಂದಲ್ಲ ಒಂದು ರೀತಿಯಿಂದ ಅನಿವಾರ್ಯ ಅಗತ್ಯ. ಈ ಕಾರಣದಿಂದ ರೈತರು ಹೊಲದಲ್ಲಿ ಕಣಮಾಡಿ ಹಂತಿತಿರುಗಿಸಿ ಮೇದ ತೂರಿ, ಸುಂಕ ಹೊಟ್ಟು ಕಸಕಡ್ಡಿ, ಮಣ್ಣು, ಹರಳುಗಳಿಂದ ಕಾಳು ಬೇರ್ಪಡಿಸಿ, ರಾಸಿ ಮಾಡಲು ಹಂತಿ ಒಂದು ಮಹತ್ವದ ಸಾಮೂಹಿಕ ಪ್ರಕ್ರಿಯೆ. ಹೊಲದಲ್ಲಿ ಕಣಮಾಡಿ ನೆಟ್ಟು ಎತ್ತುಗಳನ್ನು ಎರಡು, ನಾಲ್ಕು, ಆರು ಹೀಗೆ ಸಾಲಾಗಿಕಟ್ಟಿ ಕಣದ ತುಂಬ ಜೋಳ ಗೋದಿ ಇತ್ಯಾದಿ ಒಕ್ಕುವುದು. ಜೋಳವಾದರೆ ಬರೀ ತೆನೆ, ಗೋದಿ ಇತ್ಯಾದಿಯಾದರೆ ಸ್ವಚ್ಛಗೊಳಿಸಿದ ತೆನೆ ಸಹಿತ ಹುಲ್ಲು–ಕಣದ ತುಂಬ ಹರಡಿ ಒಕ್ಕುವರು. ರೈತರು ಒಂದೊಂದಾಗಿ

ತಮ್ಮ ಬದುಕಿನ ಅನಿಸಿಕೆ ಸುಖ ದು:ಖ, ನೋವು ನಲಿವು, ಪ್ರೇಮ, ಕಾಮ, ಪ್ರಣಯ, ಹಾಸ್ಯ, ವಿಡಂಬನೆ, ಮಳೆ, ಗಾಳಿ ಹೀಗೆ ತಮ್ಮ ಬದುಕಿನುದ್ದಕ್ಕೂ ಬಂದ ವಿವಿಧ ಅನುಭವಗಳನ್ನು ಸಹಸ್ರಾರು ಧಾಟಿ, ಮಟ್ಟು, ಲಯಗಳಲ್ಲಿ ಹಂತಿಯ ಹಾಡುಗಳನ್ನು ಹಾಡುತ್ತಾರೆ. ಇದರಲ್ಲಿ ಮುಖ್ಯವಾಗಿ ಕಲ್ಯಾಣ ಬಸವಯ್ಯ, ಮಾದಾರ ಚೆನ್ನಯ್ಯ, ಹರಳಯ್ಯ ಮುಂತಾದ ಹಾಡುಗಳು ಸೇರಿವೆ. ಕಂಪನಿ ಸರಕಾರದ ವಿರುದ್ಧ ಹೋರಾಡಿ ತಮ್ಮ ಪ್ರಾಣ ತೆತ್ತ ವೀರಮಹಿಳೆ ಕಿತ್ತೂರ ರಾಣಿ ಚೆನ್ನಮ್ಮ, ನರಗುಂದ ಬಾಬಾಸಾಹೇಬ, ಮುಂಡರಗಿ ಭೀಮರಾಯ ಮುಂತಾದವರನ್ನು ಸ್ಮರಿಸುವ, ಅವರ ಹಾಡುಗಳಲ್ಲಿ ಕಂಡುಬರುವ ಅನುಕಂಪ ಅಭಿಮಾನ, ಅಂತ:ಕರಣಗಳು ಅಪೂರ್ವ.

ಜೀವನ ಶ್ರದ್ಧೆ, ಜೀವನ ಪ್ರೀತಿಗಳನ್ನು ಉಸಿರಾಡಿಸುತ್ತ ಬಂದ ಜನಪದರು, ಎಲ್ಲಕ್ಕೂ ಮೇಲಾಗಿ ಸ್ವಾಭಿಮಾನಕ್ಕೆ ಬೆಲೆಕೊಟ್ಟವರು. ಬಸವಣ್ಣನನ್ನು ಸ್ತುತಿಸುವ ಒಂದು ಹಾಡಿನಲ್ಲಿ ಒಟ್ಟು ಜನಪದರ ಜೀವನ ಧೋರಣೆ ಸ್ಫುಟವಾಗಿ ಮೂಡಿ ಬಂದಿದೆ.

ಎತ್ತುಗಳ ಜೊತೆ ಜೊತೆಗೇ ಬಾಳೇ ಬದುಕು ಮಾಡುವ ಒಕ್ಕಲಿಗರು ಮತ್ತು ಕೂಲಿ ಕಾರ್ಮಿಕರು ಬಸವಣ್ಣನಿಗೆ ಪ್ರಾರ್ಥನೆ ಸಲ್ಲಿಸುವಾಗ ಕರುಣ ಬಂದರೆ ಕಾಪಾಡು, ಮರಣ ಬಂದಾಗ ಒಯ್ದುಬಿಡು. ಆದರೆ ಕೊನೆವರೆಗೂ ಅಭಿಮಾನ ಮಾತ್ರ ಕಾಪಾಡೆನ್ನುತ್ತಾರೆ. ಈ ಕೆಲವು ಹಾಡುಗಳ ರೀತಿ ತುಂಬು ಹೃದಯಸ್ಪರ್ಶಿಯಾಗಿದೆ.

ಹಾಡ ಬಲ್ಲವನೆಂದು ಹಾರ್‍ಯಾರಿ ಬೀಳಬ್ಯಾಡೊ
ಹಾಡೀನ ಹಗೆವೈತಿ ನಮಬಲ್ಲಿ–ಎಲೆ ಹುಡಗ
ಹಳಿ ಮಾಪು ತಂದು ಅಳಕೋರೋ

ಎಂದು ಹಂತಿ ತಿರುಗಿಸುವ ಗಂಡಸು ಹೇಳುತ್ತಾನೆ. ಕಾರಣ ಹಂತಿಯ ಹಾಡುಗಳ ಅಪಾರ ರಾಶಿಯಲ್ಲಿನ ಒಂದು ಬೊಗಸೆ ಮಾತ್ರ ಇಲ್ಲಿದೆ. ಹಂತಿಯ ಹಾಡುಗಳಲ್ಲಿ ಕಂಡುಬರುವ ವಾಸ್ತವತೆ ಸಂವೇದನಾಶೀಲತೆಗಳು ಕೆಲವೊಮ್ಮೆ ಅದ್ಭುತವಾಗಿ

ವ್ಯಕ್ತವಾಗುತ್ತವೆ ಮತ್ತು ಸಾಂಕೇತಿಕತೆಗೆ ವಿರಳ ಮಾದರಿಯಾಗುತ್ತವೆ.

ಒಟ್ಟಾರೆ ಈ ಕೃತಿಯು ಉತ್ತರ ಕರ್ನಾಟಕದಲ್ಲಿ ಇಂದಿಗೂ ಪ್ರಚಲಿತವಿರುವ ಹಂತಿ ಹಾಡುಗಳನ್ನು ಸಂಗ್ರಹಿಸಿ ಸಿದ್ಧಪಡಿಸಿದ ಮಹತ್ವದ ಕೃತಿ ಎಂದು ಹೇಳಬಹುದು.

ಡೊಂಬರ ಸಂಸ್ಕೃತಿ : ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರದಿಂದ ಉಪ ಸಂಸ್ಕೃತಿ ಮಾಲೆಯಲ್ಲಿ ೧೯೯೩ ರಲ್ಲಿ ಪ್ರಕಟಗೊಂಡಿದೆ. ಪ್ರೊ. ಬರಗೂರು ರಾಮಚಂದ್ರಪ್ಪನವರು ಸಂಸ್ಕೃತಿ-ಉಪಸಂಸ್ಕೃತಿ ಕುರಿತು ಸುಮಾರು ನಲವತ್ತಾರು ಪುಟಗಳ ಪ್ರಸ್ತಾವನೆಯನ್ನು ಬರೆದಿದ್ದಾರೆ. ಡೊಂಬರ ಹಿನ್ನೆಲೆ, ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ, ಭಾಷೆ-ಸಾಹಿತ್ಯ, ಆಚರಣೆ ಮತ್ತು ಕಲೆ, ಪ್ರದರ್ಶನಾತ್ಮಕ ಕಲೆಗಳು, ಕ್ರೀಡೆಗಳು, ಸಾಮಾಜಿಕ ಪರಿವರ್ತನೆ ಮುಂತಾದ ವಿಷಯಗಳನ್ನು ಒಳಗೊಂಡಿದೆ. ಡೊಂಬಗ ನೆಲಿ ಇಲ್ಲ, ಡಂಬಿಗಿ ಬೆಲಿ ಇಲ್ಲ. ಇದು ಡೊಂಬರಿಗೆ ಸಂಬಂಧಿಸಿದ ಒಂದು ಗಾದೆ. ಈ ಗಾದೆ ಎರಡು ಅಂಶಗಳನ್ನು ಸ್ಪಷ್ಟಪಡಿಸುತ್ತದೆ. ಒಂದು: ಡೊಂಬರಿಗೆ ಯಾವುದೇ ಒಂದು ಸ್ಥಿರವಾದ ನೆಲೆ ಇಲ್ಲ; ಎರಡು: ಡಂಬನ್ನು ಹಣ ಕೊಟ್ಟು ಕೊಳ್ಳಬೇಕಾಗಿಲ್ಲ. ಡೊಂಬನಿಗೂ ಡಂಬಿಗೂ ಸಂಬಂಧ ಕಲ್ಪಸುವ ಈ ಗಾದೆಯಲ್ಲಿ ಮತ್ತೆ ಕೆಲವು ಸಂಗತಿಗಳು ಹುದುಗಿವೆ. ಎಲ್ಲಿ ನೋಡಿದಲ್ಲಿ ಕಾಲಿಟ್ಟಲ್ಲಿ ಸಮೃದ್ಧವಾಗಿ ಬೆಳೆದ ಡಂಬಿನ ಮೆಳೆಗಳಿಂದ ತುಂಬಿದ ದಟ್ಟಡವಿಗಳ ಪರಿಸರವಿದ್ದ ಆ ಕಾಲದಿಂದಲೇ ಡೊಂಬರು, ಭೂಪ್ರದೇಶದ ವಿವಿಧ ಭೌಗೋಲಿಕ ಪಾತಳಿಗಳಲ್ಲಿ ಕಾಣಿಸಿಕೊಂಡರು; ಪರಿಸರೀಯ ಜಾಲದ, ಕ್ರೌರ್ಯ ಭಯ ಭೀತಿಗಳಿಗೆ ಜಗ್ಗದೆ, ಎಲ್ಲವನ್ನು ಶಕ್ತಿ, ಜಾಣ್ಮೆಗಳಿಂದ ತಮ್ಮ ಉಪಜೀವನ-ವಿಧಾನಗಳಿಗೆ ಒಗ್ಗಿಸಿಕೊಂಡು ಸಂದರ್ಭಾನುಸಾರ ತಾವೂ ಒಗ್ಗಿ ಯಾವುದೇ ಪ್ರದೇಶದಲ್ಲಿ ಸ್ಥಿರವಾಗಿ ಕಾಲೂರದೇ ಅಲೆಮಾರಿಗಳಾಗಿ ಬದುಕುತ್ತ ಬಂದರು ಎಂದಿದ್ದಾರೆ.

ಜನಪದ ಐತಿಹ್ಯಗಳ ಪ್ರಕಾರ ಡೊಂಬರಿಗೆ ಸಮೀಪವಾದ ಇತರ

ಅಲೆಮಾರಿ ಸಮುದಾಯಗಳೆಂದರೆ ಕೊರಚರು ಅಥವಾ ಕೊರವರು, ಲಂಬಾಣಿ ಅಥವಾ ಲಮಾಣಿ, ಡೊಮ್ಮ ಅಥವಾ ಡಮ್ಮಾರರು. ಡೋಹಾರರು ಡೊಂಬರ ವಿಶೇಷ ಸಾಮಿಪ್ಯದ ಜನಾಂಗ ಲಂಬಾಣಿ ಮತ್ತು ಕೊರವ.

ಲಂಬಾಣಿಗಳು ಮೂಲತ: ಡೊಂಬರ ಗುಂಪಿಗೆ ಸೇರಿದ ಅಲೆಮಾರಿ ವೃಂದ. ಲಂಬಾಣಿಗಳ ಮೂಲ ಪುರುಷನ ಹೆಸರು ಮೂಳ ಅಥವಾ ಮೋಳ ಎಂದಿತ್ತಂತೆ. ಡೊಂಬರಲ್ಲಿ ಡಂಬು ನೆಟ್ಟು ಹಗ್ಗ ಕಟ್ಟಿ ಮಗುವನ್ನು ಬಟ್ಟೆಯಲ್ಲಿ ಸುತ್ತಿ–ಉಸಿರಾಡಲು ಮುಖವನ್ನು ಬಿಟ್ಟು–ಹಗ್ಗಕ್ಕೆ ತಳುಕಿಸಿ ಬೀಳದಂತೆ ಅತ್ತಿಂದಿತ್ತ ಸರಗುಣಕಿಯ ಜೋಡು ಹಗ್ಗದ ಮೂಲಕ ತೂಗಿಸುವ ಸಂಪ್ರದಾಯದ ಕಸರತ್ತಿನಲ್ಲಿ ಪರಿಣತರಾದವರು. ಈ ಮೂಳ ಅಥವಾ ಮೊಳ ಪರಂಪರೆಗೆ ಸೇರಿದವರು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇಲ್ಲಿ ಗಮನಸಬೇಕಾದ ಸಂಗತಿ ಎಂದರೆ ಲಂಬಾಣಿಗರ ಮೂಲ ಪುರುಷನ ಹೆಸರು ಮೋಲಾ ಎಂದಿರುವುದು

ಡೊಂಬರ ಕಲೆಯಲ್ಲಿ ವಿಶೇಷವಾದ ಉಲ್ಲೇಖ ಕಂಪ್ಲಿರಾಯನ ಕೈಫಿಯತ್ತಿನಲ್ಲಿ ಮತ್ತು ಕುಮಾರರಾಮನ ಚರಿತ್ರೆಯಲ್ಲಿ ಬರುತ್ತದೆ (ಕಂಪ್ಲಿ ಗುತ್ತಿ ಕೈಫಿಯುತ್ತು). ಕೈಫಿಯತ್ತುಗಳಲ್ಲಿ ದೊರೆಯುವ ಸಂಗತಿಗಳು ಪರಂಪರಾಗತ, ಆದರೆ ಸೋಸಿ ನೋಡಿದ ವರದಿ. ಇವೆಲ್ಲ ಅಧ್ಯಯನದಲ್ಲಿ ನೇರವಾಗಿ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ಆದ್ದರಿಂದ ಜನಪದ ಸಾಹಿತ್ಯದಲ್ಲಿ ಬರುವ ಕಂಪಿಲದೇವಿ, ಕರಿಯಲದೇವಿ, ಕಂಪಿಲರಾಯ, ಡೊಂಬರ ರತ್ನಿ ಮತ್ತು ಚೆನ್ನಿ ಇವರಿಗೆ ಸಂಬಂಧಿಸಿದ ಅನೇಕ ಹಾಡುಗಳು (ಗದ್ದಗಿಮಠ ಮತ್ತು ಕರಾಕೃ) ಇವರ ಸಂಪಾದನೆಯಲ್ಲಿ ದೊರೆಯುತ್ತದೆ. ಕುಮಾರರಾಮನ ದುಂದುಮೆಯಲ್ಲಂತೂ ಚೆನ್ನಿಂಗ ರಾಮನ ಹಾಡುಗಬ್ಬ ಇತ್ಯಾದಿಗಳಲ್ಲಿ ಅವರ ಆಟದ ಅನೇಕ ಬಗೆಯ ಕಸರತ್ತುಗಳಿಂದ ಕೂಡಿದ ವರ್ಣನೆ ಬರುತ್ತದೆ. ಹೀಗಾಗಿ ರತ್ನಾಜಿಗೆ ಜಟಂಗನ ಶಾಪ ತಟ್ಟಿ. ರತ್ನಾಜಿ ಕೇವಲ ವೇಶ್ಯೆಯಾಗಿ ಜೀವನವನ್ನು ನಡೆಸುವ ಸಂಗತಿಗಳು ಬರುತ್ತವೆ. ಕಾರಣ ಇದು ಒಂದರಿಂದಲೇ ಡೊಂಬರ ಹೆಣ್ಣುಮಕ್ಕಳು ವೇಶ್ಯೆಯರಾದರು ಎನ್ನುವುದು ಸರಿಯಲ್ಲ. ಅವರ ಹೆಣ್ಣುಮಕ್ಕಳು ತುಂಬಾ ಚೆಲುವೆಯರಾಗಿದ್ದು ದಷ್ಟಪುಷ್ಟರಾಗಿದ್ದುದು

ಕಾರಣವಾಗಿರಬಹುದು. ಹೀಗಾಗಿಯೇ ಡೊಂಬರ ಹೆಣ್ಣುಮಕ್ಕಳು ವೀರ ಕಲೆಗಳಲ್ಲಿ ಭಾಗವಹಿಸುವ ಪರಂಪರೆ ರೂಢಿಯಲ್ಲಿ ಬಂದಿತು ಎಂದು ಹೇಳಬಹುದು. ಇದಕ್ಕೆ ಕಾರಣ ಹಲವಾರು ಇರಬಹುದು. ಆದರೆ ಯಾವುದೇ ಒಂದು ಕಾರಣ ಸಾಕಾಗದು. ಆದ್ದರಿಂದ ಡೊಂಬರ ಹೆಣ್ಣುಮಕ್ಕಳು ವೀರಕಲೆಗಳಲ್ಲಿ ಭಾಗವಹಿಸುವ ಪರಂಪರೆ ಈ ಬುಡಕಟ್ಟಿನಲ್ಲಿ ಮುಂದುವರೆದಿದ್ದು ಸಹಜವಾಗಿದೆ. ಇವರ ವೀರಕಲೆಗಳ ಆಚರಣೆಯಲ್ಲಿ ಮೈಕೈ ಪ್ರದರ್ಶನ ಮುಂತಾದವು ಆಗುವುದರಿಂದ ಚಿತ್ತಾಕರ್ಷಕವಾಗಿ ಕಾಣುತ್ತಾರೆ. ಏಕೆಂದರೆ ಬಿರುಸಿನ ಈ ಕಲೆಗ್ಗಳು ಪ್ರದರ್ಶನದ ಕಾಲಕ್ಕೆ ತುಂಬಾ ಚಿತ್ತಾಕರ್ಷಕವಾದುದರಿಂದ ಜನಮನದ ಆಕರ್ಷಣೆಯನ್ನು ಸೆಳೆಯುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಹೀಗಾಗಿ ಊರಗೌಡನೋ ಪಾಳೆಯಗಾರನೋ ಮತ್ತಾರೋ ಈ ಹೆಣ್ಣುಮಕ್ಕಳು ಕೇಳಿದಷ್ಟು ಹಣವನ್ನು ಆ ಮನೆಯ ಯಜಮಾನನಿಗೆ ಮುಟ್ಟಿಸಿ ಅಂಥ ಹೆಣ್ಣುಮಗಳನ್ನು ತಮ್ಮ ಭೋಗದ ವಸ್ತುವನ್ನಾಗಿ ಇಟ್ಟುಕೊಳ್ಳುವ ಪರಂಪರೆ, ಬಹಳ ಕಾಲದಿಂದಲೂ ನಡೆದುಬಂದಿದೆ. ಕಾರಣ ಕಲೆಗಳ ಪ್ರದರ್ಶನದಲ್ಲಿ ಡೊಂಬರು ಮಾತ್ರ ಭಾಗವಹಿಸುವ ಪರಂಪರೆ ಇಂದಿಗೂ ಕರ್ನಾಟಕದಲ್ಲಿ ರೂಢಿಯಲ್ಲಿರುವುದು ಕಂಡುಬರುತ್ತದೆ. ಈ ಕಾರಣದಿಂದ ಕೆಲವು ಕಡೆಗೆ ಪ್ರಾದೇಶಿಕವಾಗಿ ಈ ರೂಢಿ ಮನೆತನದಿಂದ ಮನೆತನಕ್ಕೆ ಸಾಗಿಬಂದಿತೆಂದು ಹೇಳಬಹುದು.

ಒಟ್ಟಾರೆ ಡೊಂಬರ ಸಂಸ್ಕೃತಿ ಕೃತಿಯಲ್ಲಿ ಡೊಂಬರ ಅನೇಕ ಉಪಯುಕ್ತ ಮಾಹಿತಿಗಳು ಜನಾಂಗದ ಎಲ್ಲ ಬಗೆಯ ರೀತಿ, ನೀತಿ, ನಡಾವಳಿಗಳನ್ನು ಕುರಿತು ಡಾ. ಹಕಾರಿಯವರು ವಿಶ್ಲೇಷಿಸಿದ್ದಾರೆ.

ವ್ಹಾಯ್ ಫೋಕ್ಲೋರ್ ಆ್ಯಂಡ ಅದರ ರೈಟಿಂಗ್ಸ್ : ಡಾ. ಹಕಾರಿಯವರು ಇಂಗ್ಲೀಷಿನಲ್ಲಿ ಬರೆದಿರುವ ಈ ಕೃತಿಯನ್ನು, ಕರ್ನಾಟಕ ವಿಶ್ವವಿದ್ಯಾಲದ ಪ್ರಸಾರಾಂಗದವರು ೨೦೦೩ ರಲ್ಲಿ ಪ್ರಕಟ ಮಾಡಿದ್ದಾರೆ.

ಜಗತ್ತಿನ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಜಾನಪದ ಯಾಕೆ ಎನ್ನುವ ಪ್ರಶ್ನೆ ಈ ಶತಮಾನದಲ್ಲಿ ಕೇಳಿಬರುತ್ತಿದೆ. ಜಾನಪದ ಅಧ್ಯಯನ ಎಲ್ಲ

ವಿಶ್ವವಿದ್ಯಾಲಯಗಳಲ್ಲಿ ಬಹಳ ಭರಾಟೆಯಿಂದ ನಡೆಯುತ್ತಿದೆ. ಇದಕ್ಕೆ ಕಾರಣವೆಂದರೆ ಜಾನಪದ ಒಳಗೊಂಡಿರುವ ಹತ್ತಾರು ಕೀಲಿಕೈಗಳು ಯಾವುದೇ ಜನಾಂಗದ ಸಂಸ್ಕೃತಿಯನ್ನು ಅರಿಯಲು, ಅದರ ಒಳಹೋಗಲು ಕಾರಣವಾಗಿರುವುದು, ಜನಾಂಗ ಸಂಸ್ಕೃತಿ ಮೂಲಯಾಗಿರುವುದು. ಹಲಗಲಿ ಬೇಡರ ಲಾವಣಿ ಕನ್ನಡದಲ್ಲಿಯೂ ಕೂಡ ಮುದ್ರಿತವಾಗಿದೆ. ಕಾರಣ ಕನ್ನಡ ಬಲ್ಲವರು ಇದನ್ನು ಓದಿ ತಿಳಿದುಕೊಳ್ಳಲಿ ಎನ್ನುವುದು ಆಶಯವಾಗಿದೆ.

ರಾಮಿ ಅನ್ನುವ ಹೆಣ್ಣುಮಗಳು ತೋರಿದ ಶೌರ್ಯ, ಧೈರ್ಯ ಕಿತ್ತೂರ ರಾಣಿಗಿಂತಲೂ ಕಡಿಮೆಯದಲ್ಲ ಎನ್ನುವ ರೀತಿಯಲ್ಲಿ ತನ್ನ ತಂಡದ ಅಭಿಮಾನಕ್ಕಾಗಿ ಹೋರಾಡಿದಳು. ಕಾರ್ (ಬೆಂಕಿ ಸಾಹೇಬ) ಅನ್ನುವ ವ್ಯಕ್ತಿ ಮುಂಬಯಿಯಿಂದ ಸೈನ್ಯದೊಡನೆ ಬಂದು ಎಷ್ಟು ತಿಳಿಸಿ ಹೇಳಿದರೂ ಕೇಳದ ಈ ಜನ ತಮ್ಮ ಪ್ರಾಣ ತೊರೆದು ಹೋರಾಡಿದರು. ಹೀಗಾಗಿ ಸಿಟ್ಟಿಗೆದ್ದ ಕಂಪನಿ ಸರಕಾರದ ಸೈನಿಕರು ಎಲ್ಲವನ್ನು ಲೂಟಿಮಾಡಿದರು. ಬೆಂಕಿ ಹಚ್ಚಿದರು. ಆದ್ದರಿಂದ ಕಂಪನಿ ಸರಕಾರಕ್ಕೂ ಲಾಭವಿಲ್ಲ, ಹಲಗಲಿ ಬೇಡರಿಗಂತೂ ಹಾನಿಯೇ ಹಾನಿ. ಆ ದೃಷ್ಟಿಯಿಂದ ಕೃಷ್ಣಪ್ಪ ಎನ್ನುವ ದೇಸಾಯಿ ಎಷ್ಟು ಹೇಳಿದರೂ ಕೇಳದೆ ತಮ್ಮ ಬಳಿ ಇದ್ದ ಸಶ್ತ್ರಾಸ್ತ್ರಗಳನ್ನು ಕೊಡಲು ನಿರಾಕರಿಸಿದ ಬೇಡರು ಕೊನೆಯವರೆಗೂ ಕೊಡದೆ ಸ್ವಾಭಿಮಾನದಿಂದ ಹೋರಾಡಿದರು ಎಂಬ ದಾಖಲೆ ಈ ಲಾವಣಿಯಲ್ಲಿ ಲಿಖಿತವಾಗಿದೆ. ಕಾರಣ ಇದೊಂದು ಅಪರೂಪದ ಸ್ವಾತಂತ್ರ ಸಂಗ್ರಾಮದ ಹೋರಾಟ.

ಕಾಯಕ ಮತ್ತು ದಾಸೋಹ ಈ ಎರಡು ಲೇಖನಗಳು ಬಹಳ ಮಹತ್ವಪಡೆದುಕೊಂಡಿವೆ. ಇದರಲ್ಲಿ ವೀರಭದ್ರನ ಪರಂಪರೆ ಪಂಥ ಹೇಗೆ ಬೆಳೆದುಬಂತು ಇತ್ಯಾದಿ ವಿಷಯಗಳನ್ನು ಬಹಳ ವಿವರವಾಗಿ ಪರಿಶೀಲಿಸಲಾಗಿದೆ. ಜೊತೆಗೆ ಕಾಯಕದ ಕೆಲಸಮಾಡಿ ತಿನ್ನುವುದಲ್ಲ, ದುಡಿಯುವುದರ ಜೊತೆಗೆ ಭಕ್ತಿಯನ್ನು ಇಟ್ಟುಕೊಂಡು ಕಾರ್ಯಮಾಡುವುದು ಅಂದಾಗ ಮಾತ್ರ ಕಾಯಕವಾಗುತ್ತದೆ. ಎನ್ನುವ ವಿಷಯ ಬಹಳ ವಿವರವಾಗಿ ಇಲ್ಲಿ ಮೂಡಿಬಂದಿದೆ. ಮೈಲಾರ ಪಂಥ ಎನ್ನುವ ಲೇಖನದಲ್ಲಿ ಮುತ್ತು ಚಿಗಿತಲೇ ಪರಾಕ,

ಸವನಿಧಿಯಲೇ ಪರಾಕ, ಕಲಕಮಲಕಲೇ ಪರಾಕ, ಕೆಂಜಾಲ ಮರಕ್ಕೆ ಮುತ್ತಿನ ಗಿಳಿ ಕುಂತತಲೇ ಪರಾಕ, ಆಕಾಶಕ್ಕ ಸಿಡ್ಲ ಬಡಿತಲೆ ಪರಾಕ, ಆಕಾಶಕ್ಕ ಕೀಲ ಕಡಿತಲೇ ಪರಾಕ ಇತ್ಯಾದಿ ಕಾರಣಿಕ ಇದರಲ್ಲಿ ಉಲ್ಲೇಖಿತವಾಗಿರುವುದು ಕಂಡುಬರುತ್ತದೆ. ಅದರ ಜೊತೆಗೆ, ಮರ್ತ್ಯಕ್ಕ ಮಬ್ಬುಗವೀತಲೆ ಪರಾಕ, ಕೆಂಜಿಗಿ ಅಂಜಿಹೋತಲೆ ಪರಾಕ; ಮುಂತಾದ ಭವಿಷ್ಯವನ್ನು ಹೇಳುವ ಅನೇಕ ಕಾರಣಿಕಗಳು ಇದರಲ್ಲಿ ಕಂಡುಬರುತ್ತವೆ. ಇದರ ಜೊತೆಗೆ ಕುಡುಲೂರ ಬಸವಲಿಂಗ ಶರಣರ ಯಾತರಿಂದಲಿ ಮಾಡಲಿ ಆತ್ಮನ ಪೂಜೆ, ಎತ್ತ ನೋಡಿದರೆ ತಾನಿದಿ ಎನ್ನುವ ಪದ್ಯವು ವಿವೇಚನೆಗೆ ಒಳಗಾಗಿದೆ.

ಡಾ. ಹಕಾರಿಯವರು ಇಂಗ್ಲೀಷಿನಲ್ಲಿ ಬರೆದ ಈ ಕೃತಿಯಲ್ಲಿ ಹಲಗಲಿ ಬೇಡರ ಲಾವಣಿಗಳಿಂದ ಹಿಡಿದು ವೀರಭದ್ರನ ಒಡಬು ಹಿನ್ನೆಲೆ ಮೈಲಾರಲಿಂಗನ ಭಕ್ತಿ ಪಂಥ , ವೀರಭದ್ರ ಪುರವಂತನ ಭಾವಚಿತ್ರ, ಶ್ರೀಕೃಷ್ಣ ಪಾರಿಜಾತದ ಪುನರುತ್ಥಾನದಲ್ಲಿ ತೊಡಗಿದ ಶ್ರೀ ಬಸವಲಿಂಗಯ್ಯ ಹಿರೇಮಠ ದಂಪತಿಗಳ ಭಾವಚಿತ್ರವು ಮುಖಪುಟದಲ್ಲಿ ಅಡಕವಾಗಿರುವುದು ವಿಶೇಷವಾಗಿದೆ. ಇದೊಂದು ಅತ್ಯುತ್ತಮ ಕೃತಿಯೆಂದು ಹೇಳಬಹುದು.


ಜನಪದ ಹಾಡು ಮತ್ತು ಭಕ್ತಿ : ಹಾಡು ಹುಡಿಗೂಡಿ ಹೋಗಬಹುದಾದ ಇಂದಿನ ದಿನಮಾನಗಳಲ್ಲಿ ಜನಪದ ಹಾಡುಗಳಲ್ಲಿ ಭಕ್ತಿ–ಅನುಭಾವದ ಬಗ್ಗೆ ಡಾ. ಹಕಾರಿಯವರು ಈ ಚಿಕ್ಕ ಪುಸ್ತಿಕೆಯಲ್ಲಿ ಹೇಳಿದ್ದಾರೆ. ಜನಪದ ಹಾಡುಗಳ ಪ್ರಪಂಚದ ವೈವಿದ್ಯ ವಿಪುಲತೆಗಳು ದಂಗುಬಡಿಸುವಂಥವು. ಏಕೆಂದರೆ ಹಲವಾರು ವಿಭಾಗ–ಒಳವಿಭಾಗಗಳೂ ಉಂಟು. ಕುಟ್ಟುವ, ಬೀಸುವ ಹಾಡು, ಅಡುಗೆ ಮನೆಯಲ್ಲಿ ಲಕ್ಷ್ಮೀ ಕಂಬಕ್ಕೆ ಹೆಪ್ಪು ಹಾಕಿ, ಮೊಸರನ್ನು ಕಡೆಯುವಾಗಿನ ಹಾಡು, ಒಕ್ಕಲುತನದ ಹಿನ್ನೆಲೆಯ ನಾಟಿಹಾಡು, ಜೋಳ ಕೊಯ್ಯುವಾಗ, ತೆನೆ ಮುರಿಯುವಾಗ, ಹಂತಿ ತಿರುಗಿಸುತ್ತ ಒಂದು ಹಂತಿಯಿಂದ ಮತ್ತೊಂದು ಹಂತಿಗೆ ಖೋ ಕೊಟ್ಟ ಹಾಗೆ ಬೆಳ್ಳಂಬೆಳಗು ಕೇಳುವ ಹಂತೀಹಾಡು, ಹಬ್ಬ ಹರಿದಿನಗಳ, ಸೀಗೆಹುಣ್ಣಿಮೆಯ ಚರಗ ಚಲ್ಲುವ ಹಾಡು, ಪಂಚಮಿ ಹಬ್ಬ, ದೀವಳಿಗೆಗಳಲ್ಲಿ ಅಂಟಿಗೆ–ಪಂಟಿಗೆ, ಆಣಿ–ಪೀಣಿ, ಹಾಡು, ದೇಶಭಕ್ತಿ,

ರಾಷ್ಟ್ರಪ್ರೇಮದ ರಾಷ್ಟ್ರಾಭಿಮಾನದ ಹಾಡು ಇದೆಲ್ಲ ಒಂದು ವಿಶೇಷ ಅಧ್ಯಯನಕ್ಕೆ ವಸ್ತು.

ಜನಪದ ಹಾಡುಗಳಲ್ಲಿ ಭಕ್ತಿ ಎನ್ನುವುದು ಒಂದು ರೀತಿಯಲ್ಲಿ ಆತ್ಮಶೋಧ, ಅಂತರಂಗದ ಶೋಧ. ಈ ರೀತಿಯಲ್ಲಿ ವ್ಯಕ್ತಿ ತನ್ನ ನಡೆನುಡಿಗಳನ್ನು ವಿವೇಚಿಸುವುದು, ತನ್ನ ನಡತೆಯ ಸರಿ–ತಪ್ಪುಗಳ ಎಣಿಕೆ ಮಾಡುವುದು, ತಪ್ಪುಗಳ ಕಡಮೆಗೊಳಿಸುವುದು ಮತ್ತು ಸರಿಗಳನ್ನು ವರ್ಧಿಸಿಕೊಳ್ಳುವುದು ಇದು ಅನುಭಾವದ ಹಾದಿ ಕೂಡ.

ಬಾಯ ಬ್ರಹ್ಮವ ನುಡಿದನುಭಾವವಿಲ್ಲದ ಮಾಯಾ ಮೋಹಿಗೆ ಭಾವದ ತರತಮಗಳ ದೃಷ್ಟಿಯಿಂದ ಭಾವದ ಉತ್ಕಟತೆಗಳ ಹಿನ್ನೆಲೆಯಲ್ಲಿ ಶ್ರದ್ಧಾ ಭಕ್ತಿ ಸಮರ್ಪಣಭಕ್ತಿ ಇತ್ಯಾದಿ ಹೇಳಲಾಗುತ್ತದೆ. ಆದರೆ ಅನುಭಾವ ಭಕ್ತಿಯ ಚಿತ್ತಸ್ಥಿತಿ ವ್ಯಕ್ತಿಯನ್ನು ಉದಾತ್ತಗೊಳಿಸುತ್ತದೆ, ವ್ಯಕ್ತಿಯ ನಡೆನುಡಿಗಳಲ್ಲಿ ಪ್ರೀತಿತುಂಬುತ್ತದೆ. ಆದರೆ ಜನಪದ ಹಾಡುಗಳಲ್ಲಿ ಕಾಣುವ ಭಕ್ತಿ ಮೇಲುನೋಟಕ್ಕೆ ಕಾಣುವ ಸರಳ ಮುಗ್ಧ ಭಕ್ತಿ. ಅಂತರಾಳದಲ್ಲಿ ಸ್ಫುರಿಸುವ ಬೆಳಕು ಹೊರಗಣ್ಣಿಗೆ ಕಾಣುವುದಿಲ್ಲ. ಈ ಭಾವದಲ್ಲಿ ಅಚ್ಚರಿ ಅದ್ಭುತಗಳು ಮೇಳೈಸುತ್ತವೆ. ಈ ಚಿಕ್ಕ ಪುಸ್ತಿಕೆಯಲ್ಲಿ ಡಾ. ಹಕಾರಿ ಅವರು ಜನಪದ ಹಾಡು ಮತ್ತು ಭಕ್ತಿಯ ಬಗ್ಗೆ ಬಹಳ ಸುಂದರವಾಗಿ ಸರಳವಾಗಿ ನಿರೂಪಿಸಿದ್ದಾರೆ.

ಡಾ. ದೇವೇಂದ್ರಕುಮಾರ ಹಕಾರಿಯವರು ಕಾದಂಬರಿ, ಕಾವ್ಯ, ವಿಮರ್ಶೆ, ಸಣ್ಣಕಥೆ, ನಾಟಕ, ಜೀವನ ಚರಿತ್ರೆ, ಸಂಪಾದನೆ ಕ್ಷೇತ್ರಗಳಲ್ಲಿ ಕೃಷಿಮಾಡಿ ಹಲವು ಗ್ರಂಥಗಳ ಕರ್ತೃವಾಗಿದ್ದಾರೆ.



ದೇವೇಂದ್ರ ಕುಮಾರ ಹಕಾರಿ

ದೇವೇಂದ್ರಕುಮಾರ ಹಕಾರಿಯವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜಾನಪದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹಿರಿಯ ಅಧಿಕಾರಿಗಳಿಗೆ ಬೆಂಬಲವಾಗಿ ನಿಂತರು. ತಾವು ಅಧಿಕಾರಿಯಾದಾಗ ಕಿರಿಯರು ಜಾನಪದ ಕ್ಷೇತ್ರಕ್ಕೆ ಪ್ರವೇಶಿಸಲು ಪ್ರೋತ್ಸಾಹಿಸಿದರು. ಸ್ವಂತ ಬರವಣಿಗೆಯ ಜೊತೆಗೆ ಜಾನಪದ ಕಾಳಜಿಯನ್ನು ಜೀವಂತವಾಗಿ ಬಳಿಸಿಕೊಂಡರು. ಜಾನಪದದ ಮೂಲ ತತ್ವಗಳ ಬಗೆಗೆ ಆಳವಾಗಿ ಚಿಂತಿಸಿದರು; ಜಾನಪದ ವಿಚಾರಗಳನ್ನು ಗಂಭೀರವಾಗಿ ವಿಶ್ಲೇಷಿಸಿದರು. ಅವರ ಜಾನಪದ ಬರವಣಿಗೆ ಅಕಾಡೆಮಿ ಶಿಸ್ತಿಗೆ ಒಳಪಟ್ಟಿದೆ. ಜಾನಪದ ಸಂಘ ಸಂಸ್ಥೆಗಳೊಡನೆ ಸಂಪರ್ಕವಿಟ್ಟುಕೊಂಡು ಜಾನಪದ ಪ್ರಚಾರಕ್ಕೂ ಆಸಕ್ತಿ ವಹಿಸಿದರು. ದೇವೇಂದ್ರಕುಮಾರ ಹಕಾರಿಯವರು ನಿಷ್ಠಾವಂತ ಜಾನಪದ ಪರಿಚಾರಕರಾಗಿದ್ದರು. ಅವರನ್ನು ಹತ್ತಿರದಿಂದ ಬಲ್ಲಂತಹ ಡಾ. ಹರಿಲಾಲ ಪವಾರರು ಪ್ರಸ್ತುತ ಗ್ರಂಥದ ಲೇಖಕರಾಗಿದ್ದಾರೆ.

ಪ್ರೊ ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ. 1, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-560 054